ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 50 ಡಿಸೆಂಬರ್ 13, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ದೇಶದ ರಾಜಕೀಯಕ್ಕೊಂದು ಹೊಸ ತಿರುವು

ರಾಜೀವ್ ಸರ್ಕಾರದ ರಾಜೀನಾಮೆ ವರೆಗೂ ಹೋರಾಟ ಮುಂದುವರಿಕೆ

ಚಾರಿತ್ರಿಕ ದೆಹಲಿ ರ್‍ಯಾಲಿಯ ಪಣ

ಡಿಸೆಂಬರ್ 9, 1987, ಸ್ವಾತಂತ್ರ್ಯೋತ್ತರ ಭಾರತ ದಇತಿಹಾಸದಲ್ಲೇ ಅಭೂತ ಪೂರ್ವ ದಿನ. ದೇಶದ ಎಲ್ಲಾ ಜನ ವಿಭಾಗಗಳ, ಮುಖ್ಯವಾಗಿ ದುಡಿಯುವ ಜನಗಳನ್ನು 10 ಲಕ್ಷಕ್ಕೂ ಹೆಚ್ಚು ಕೆಂಬಾವುಟ ಹೊತ್ತ ಪ್ರತಿನಿಧಿಗಳು ಐತಿಹಾಸಿಕ ನಗರ ದೆಹಲಿಯ ಪ್ರಮುಖ ರಸ್ತೆಗಳಲ್ಲಿ ಕೆಂಪು ಸಾಗರದ ಅಲೆಗಳಂತೆ ಸಾಗಿ ದೇಶದಾದ್ಯಂತ ಕಳೆದ ಒಂದು ತಿಂಗಳಲ್ಲಿ ಜಾಗೃತಗೊಂಡಿರುವ ಹೊಸ ಚೇತನವನ್ನು, ವಾತಾವರಣವನ್ನು ದೆಹಲಿಯ ಪ್ರಭುಗಳಿಗೆ ಮನಗಾಣಿಸಿ ಕೊಟ್ಟರು. ಆರು ಜಾಥಾಗಳು ಹಾಗೂ ಹಲವಾರು ಉಪ ಜಾಥಾಗಳು ದೇಶದ ಮೂಲೆ-ಮೂಲೆಯಲ್ಲೂ ಹೊಸ ಪ್ರಜ್ಞೆಯೊಂದನ್ನು ಮೂಡಿಸುತ್ತಿರುವುದನ್ನು ಕಳೆದ ಒಂದು ತಿಂಗಳಿಂದಲೂ ಪರಸ್ಪರ ಮಾತನಾಡಿಕೊಂಡೋ ಎಂಬಂತೆ ಕಡೆಗಣಿಸಿದ್ದ ಆಳುವ ಪಕ್ಷದ ಹಾಗೂ ಆಳುವ ವರ್ಗಗಳ ತುತ್ತೂರಿಗಳಾದ ಸಮೂಹ ಮಾಧ್ಯಮಗಳು—ಆಕಾಶವಾಣಿ, ದೂರದರ್ಶನ ಮತ್ತು ಬಂಡವಾಳಶಾಹಿ ಪತ್ರಿಕೆಗಳು–ಕೂಡಾ ನಿರ್ವಾಹವಿಲ್ಲದೆ ಎಡ ಪಕ್ಷಗಳು ಸಂಘಟಿಸಿದ ಡಿಸೆಂಬರ್ 9ರ ರ್‍ಯಾಲಿಯನ್ನು ಗಮನಿಸಬೇಕಾಗಿ ಬಂದದ್ದು ಇದರ ಅಗಾಧತೆಯನ್ನು, ರಾಜಕೀಯ ಮಹತ್ವವನ್ನು ಎತ್ತಿ ತೋರಿದೆ.

ಜನಸಾಗರದ ನಡುವೆ "ರಾಜೀವ್ ಸರ್ಕಾರ್ ಇಸ್ತೀಫಾದೋ" (ರಾಜೀವ ಸರ್ಕಾರ ರಾಜಿನಾಮೆ ಕೊಡಿ) ಎಂಬ ದಪ್ಪಕ್ಷರಗಳ ಘೋಷಣೆಯ ಹಿನ್ನೆಲೆಯ ವೇದಿಕೆಯಲ್ಲಿ ದೇಶದ ಎಡ ಪಕ್ಷಗಳ ಪ್ರಮುಖ ಮುಖಂಡರು ಆಸೀನರಾಗಿದ್ದ ದೃಶ್ಯ ಭಾರತದ ಎಡ ಆಂದೋಲನದ ಒಂದು ಮೈಲಿಗಲ್ಲು. ಕಾಂಗ್ರೆಸ್ (ಐ) ಗೆ ಸಮರ್ಥ ಪರ್ಯಾಯ ಸಾಧ್ಯವೇ, ಸಾಧ್ಯವಿದ್ದರೆ ಅದು ಹೇಗಿರುತ್ತದೆ ಎಂಬ ಹಲವಾರು ಪ್ರಮಾಣಿಕ ಪ್ರಶ್ನೆಗೆ ಒಂದು ತಿಂಗಳ ಪ್ರಕ್ಷೋಭೆ ಮತ್ತು ಈ ಐತಿಹಾಸಿಕ ರ್‍ಯಾಲಿ ಉತ್ತರ ನೀಡಿವೆ. ಮಾತ್ರವಲ್ಲ, ಎಡ ಮತ್ತು ಪ್ರಜಾಪ್ರಭುತ್ವವಾದೀ ಆಂದೋಲನಕ್ಕೆ ಹೊಸ ತಿರುವು ನೀಡಿದೆ ಎಂದು ವಸ್ತುನಿಷ್ಟ ರಾಜಕೀಯ ವೀಕ್ಷಕರೂ ಅಭಿಪ್ರಾಯ ಪಟ್ಟಿದ್ದಾರೆ. ವೇದಿಕೆಯ ಮೇಲೆ ಸಿ.ಪಿ.ಐ. (ಎಂ) ಮುಖಂಡರಾದ ಹರ್‌ಕಿಶನ್‌ಸಿಂಗ್ ಸುರ್ಜಿತ್, ಬಿ.ಟಿ.ರಣದಿವೆ, ಇ.ಎಂ.ಎಸ್. ಹಾಗೂ ಜ್ಯೋತಿಬಸು, ಸಿ.ಪಿ.ಐ. ಮುಖಂಡರಾದ ರಾಜೇಶ್ವರರಾವ್ ಹೋಮಿದಾಜಿ, ಮತ್ತು ಇಂದ್ರಜಿತ್ ಗುಪ್ತ, ಫಾರ್ವರ್ಡ್ ಬ್ಲಾಕ್ ಮುಖಂಡ ಚಿತ್ತಬಸು ಹಾಗೂ ಆರ್.ಎಸ್.ಪಿ. ಮುಖಂಡರುಗಳಾದ ಪ್ರದೀಪ್ ಚೌಧುರಿ ಹಾಗೂ ಜತಿನ್ ಚಕ್ರವರ್ತಿ ಆಸೀನರಾಗಿದ್ದರು.

ರ್‍ಯಾಲಿ, ಮೆರವಣಿಗೆಗಳು ನಡೆದಾಗಲೆಲ್ಲಾ ಅಹಿತಕರ ಘಟನೆಗಳನ್ನು ತಪ್ಪದೇ ಅನುಭವಿಸಿರುವ ದೆಹಲಿಯ ಜನರು, ಮುಖ್ಯವಾಗಿ ಪೋಲೀಸರು, ಈ ಬೃಹತ್ ರ್‍ಯಾಲಿಯ ನಡುವೆಯೂ ನಿಶ್ಚಿಂತೆಯಿಂದ ಉಸಿರಾಡಲು ಸಾಧ್ಯವಾದುದನ್ನು ಕಂಡು ದಂಗಾದರಂತೆ. ಅತ್ಯಂತ ಶಿಸ್ತಿನಿಂದ, ಗಾಂಭೀರ್ಯದಿಂದ ಕೂಡಿದ ಈ ಮೆರವಣಿಗೆಯಲ್ಲಿ ಹಾಗೂ ರ್‍ಯಾಲಿಯಲ್ಲಿ ಭಾಗವಹಿಸಿದವರಲ್ಲಿ ಎಡ ಪಂಥೀಯರ ಕೋಟೆಗಳೆನಿಸಿದ ಪಶ್ಚಿಮ ಬಂಗಾಳ ಹಾಗೂ ಕೇರಳದಿಂದ ಬಂದವರ ಸಂಖ್ಯೆ ಬಹಳ ಕಮ್ಮಿಯಿದ್ದು, ಹಿಂದೀ ಪ್ರದೇಶಗಳಿಂದ ಬಂದವರೇ ಬಹುಸಂಖ್ಯೆಯಲ್ಲಿದ್ದರೆಂಬ ಬೂರ್ಜ್ವಾ ವೀಕ್ಷಕರಿಗೆ ತೀರಾ ಅನಿರೀಕ್ಷಿತವಾದ ಸಂಗತಿ. ಬಿ.ಜೆ.ಪಿ. ಸಮರ್ಥಕರಲ್ಲಿ ನಡುಕ ಹುಟ್ಟಿಸಿದರೆ, ಕೇವಲ ಚುನಾವಣಾ ದೃಷ್ಟಿಯಿಂದ ಬಿ.ಜೆ.ಪಿ.ಯ ಕೋಮುವಾದೀ ಚಾರಿತ್ರ್ಯದತ್ತ ಕುರುಡಾಗಬೇಕಾಗುತ್ತದೆ ಎಂದು ಭಾವಿಸಿರುವ ಜಾತ್ಯಾತೀತ ವಿರೋಧ ಪಕ್ಷಗಳ ಮುಖಂಡರು ಪುನರಾಲೋಚನೆ ಮಾಡುವಂತಾಗಿದೆ.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸುರವರು ಈ ರಾಷ್ಟ್ರೀಯ ಪ್ರಕ್ಷೋಭೆ ಹಾಗೂ ರ್‍ಯಾಲಿಯ ಉದ್ದೇಶ

(8ನೇ ಪುಟ ನೋಡಿ)

ಮತ್ತೊಂದು ಸಾಲಮೇಳ

ರಾಜ್ಯದಲ್ಲಿ ಜನತಾ ಸರ್ಕಾರ ಆಡಳಿತಕ್ಕೆ ಬಂದಂದಿನಿಂದ ಸಾಲಮೇಳಗಳ ಮಹಾಪೂರವೇ ಹರಿಯುತ್ತಿದೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನಡೆದಿರುವ ಸಾಲಮೇಳ ಬೆಂಗಳೂರು ಜಿಲ್ಲೆಯಲ್ಲಿ ಬೆಂಗಳೂರುನಗರದಲ್ಲಿ ಹತ್ತಾರು ಬಾರಿ ಜರುಗಿದೆ. ಸಾಲಮೇಳ ನಡೆಯುವ ರೀತಿ, ಅದರಲ್ಲಿ ಸಾಲಕೊಟ್ಟವರ ಸಂಖ್ಯೆಯನ್ನು ಘೋಷಿಸುವುದರಲ್ಲಿ ನಡೆಯುವ ದಗಲಬಾಜಿತನ, ಕಾಂಗ್ರೆ ಪುಢಾರಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವ ರೀತಿ ಈ ಎಲ್ಲದರ ಬಗ್ಗೆ ಈ ಹಿಂದೆಯೇ "ಐಕ್ಯರಂಗ"ದಲ್ಲಿ ಕ್ಷಕಿರಣ ಬೀರಲಾಗಿದೆ.

ಈಗ ಮತ್ತೊಂದು ಸಾಲಮೇಳ, ದೇಶದಲ್ಲಿಯೇ ಅತ್ಯಂತ ಬೃಹತ್ ಎಂದು ಮಹಿಳೆಯರಿಗಾಗಿಯೇ ಮೀಸಲಾದ ಮೇಳವೆಂದು ಪ್ರಸಿದ್ಧಿಸಲಾದ ಮೇಳ ಇಷ್ಟು ವರ್ಷಗಳಲ್ಲಿ ಜನತಾ ಪಕ್ಷದಿಂದ ಪ್ರತಿಭಟನೆಗೊಳಗಾದ ಸಾಲಮೇಳವೂ ಇದಾಗಿದೆ. ಇಲ್ಲಿಯವರೆಗೆ ಜನತಾ ಪಕ್ಷದ ಕೆಲವು ಮಂತ್ರಿಗಳು ಆಗೀಗ ಸಾಲಮೇಳಗಳನ್ನು ಟೀಕಿಸುವುದು ಬಿಟ್ಟು ಜನತಾಪಕ್ಷ ಸಾಲಮೇಳಗಳನ್ನು ವಿಮರ್ಶಿಸುವ ಒಂದು ಪುಸ್ತಿಕೆಯನ್ನು ಹೊರ ತಂದದ್ದು ಬಿಟ್ಟು ನೇರ ಪ್ರತಿಭಟನೆಗೆ ಕೈ ಹಾಕಿರಲಿಲ್ಲ. ಹೀಗೆ ಬಹಿರಂಗ ಪ್ರತಿಭಟನೆಗೆ ಮೊತ್ತ ಮೊದಲಬಾರಿ ಕೈಹಾಕಿದ್ದು, ಬ್ಯಾಂಕ್‌ಗಳು ಕಾಂಗ್ರೆ ಪಕ್ಷದ ಆಸ್ತಿಯೆನ್ನುವಂತೆ, ಕಾಂಗ್ರೆ ಪುಢಾರಿಗಳೇ ಅದರ ವಾರಸುದಾರರೆನ್ನುವಂತೆ ವರ್ತಿಸುವುದರ ವಿರುದ್ಧ ಪ್ರತಿಭಟಿಸುವುದು ಸ್ವಾಗತಾರ್ಹ. ಆದರೆ ಈ ಪ್ರತಿಭಟನೆಯ ಬಗ್ಗೆ ಜನರ ನಡುವೆ ಪ್ರಚಾರ ಪ್ರಕ್ಷೋಭೆಯಲ್ಲಿ, ಬೃಹತ್ ಪ್ರಮಾಣದ ಜನರನ್ನು ಅಣಿ ನೆರೆಸುವುದರಲ್ಲಿ ಭಾರೀ ಕೊರತೆಯಿತ್ತು. ಕೇವಲ ಸಾಂಕೇತಿಕ ಪ್ರತಿಭಟನೆಯಾಗಿ ಕಂಡಿತು. ಈ ಪ್ರತಿಭಟನೆಯನ್ನು ಕೊನೆಯವರೆಗೂ ಮುಟ್ಟಿಸದೆ ಮಧ್ಯದಲ್ಲಿಯೇ ಹಿಂತೆಗೆದದ್ದು ಕೂಡ ಇದು ಅರೆ ಮನಸ್ಸಿನ ಪ್ರತಿಭಟನೆಯೆಂಬುದನ್ನು ಸಾಬೀತು ಪಡಿಸಿತು.

ಬಡವರಿಗೆ, ಬ್ಯಾಂಕ್‌ಗಳ ನೂರಾರು ವಿಧಿ ನಿಯಮಗಳಿಂದ ಸಾಲ ಪಡೆಯಲು ಅಸಾಧ್ಯವಾದ ಈ ಜನ ವಿಭಾಗಕ್ಕೆ ಅವರಿಗೆ ಜೀವನದ ಅಗತ್ಯಕ್ಕೆ ತಕ್ಕಂತೆ ಸಾಲ ನೀಡುವುದು ಅತ್ಯಂತ ಅವಶ್ಯಕ

(8ನೇ ಪುಟ ನೋಡಿ)

ಅಣ್ವಸ್ತ್ರ ರಹಿತ ವಿಶ್ವದತ್ತ ಮೊದಲ ಹೆಜ್ಜೆ

ಡಿಸೆಂಬರ್ 8 ಜಗತ್ತಿನ ಚರಿತ್ರೆಯಲ್ಲಿ ಸ್ಮರಣಾರ್ಹ ದಿನವಾಗಲಿದೆ. ಚರಿತ್ರೆಯಲ್ಲೇ ಮೊದಲ ಬಾರಿಗೆ ಅಮೇರಿಕ ಮತ್ತು ಸೋವಿಯತ್ ಒಕ್ಕೂಟದ ನಾಯಕರು ತಮ್ಮ ಮಧ್ಯಮ ಮತ್ತು ಸಮೀಪ ವ್ಯಾಪ್ತಿಯ ಪರಮಾಣು ಕ್ಷಿಪಣಿಗಳನ್ನು ನಾಶ ಮಾಡುವ ಚಾರಿತ್ರಿಕ ಒಪ್ಪಂದಕ್ಕೆ ಸಹಿ ಹಾಕಿದರು. ಇದು ಅಣ್ವಸ್ತ್ರಗಳನ್ನು ಜಗತ್ತಿನಿಂದ ಇಲ್ಲವಾಗಿಸುವ (ಅವು ನಮ್ಮ ಜಗತ್ತನ್ನು ಇಲ್ಲವಾಗಿಸುವ ಮೊದಲೇ) ಮನುಕುಲದ ಬಯಕೆಯನ್ನು ಈಡೇರಿಸುವತ್ತ ಚಿಕ್ಕದಾದರೂ ಮೊದಲ ಹೆಜ್ಜೆ. ಇದರಿಂದ ಯುರೋಪಿನಲ್ಲಿ ಅಣು ಯುದ್ಧದ ಭಯ ಹೆಚ್ಚುಕಡಿಮೆ ಇಲ್ಲವಾಗಿದೆ.

ಒಪ್ಪಂದದ ಪ್ರಕಾರ ಜಗತ್ತಿನ ಎರಡು ಅತ್ಯಂತ ಶಕ್ತಿಯುತ ದೇಶಗಳು ಒಂದು ವರ್ಗದ ಅಸ್ತ್ರಗಳನ್ನು ನಿರ್ನಾಮ ಮಾಡುತ್ತವೆ. 300 ಕಿ.ಮೀ. ನಿಂದ 3400 ಕಿ.ಮೀ ವ್ಯಾಪ್ತಿ ಇರುವ ಪರಮಾಣು ಕ್ಷಿಪಣಿಗಳನ್ನು ನಿಷೇಧಿಸುವ ಈ ಒಪ್ಪಂದದಲ್ಲಿ ಹಲವು ವಿಶೇಷ ಅಂಶಗಳು ಇವೆ. ನಿಷೇಧಿತ ವರ್ಗದ ಅಣ್ವಸ್ತ್ರಗಳ ನಾಶಒಪ್ಪಂದದ ಪ್ರಕಾರ ನಡೆಯುತ್ತಿದೆಯೇ ಎಂದು ಪರೀಕ್ಷಿಸಲು ಈ ಎರಡು ದೇಶಗಳು ಪರೀಕ್ಷಕರನ್ನು ವಿನಿಮಯ ಮಾಡಿಕೊಳ್ಳುತ್ತವೆ. ಒಂದು ದೇಶದ ಪರೀಕ್ಷಕರು ಇನ್ನೊಂದು ದೇಶದ ಕ್ಷಿಪಣಿ ನೆಲೆಗಳಲ್ಲಿ ತಂಗಿ ಈ ಪರೀಕ್ಷಣ ನಡೆಸುತ್ತಾರೆ ಎರಡೂ ದೇಶಗಳಿಗೆ ಸೇರಿದ ಸುಮಾರು 2800 ಪರಮಾಣು ಕ್ಷಿಪಣಿಗಳು ಮತ್ತು 3800 ಅಣ್ವಸ್ತ್ರ ಸಿಡಿತಲೆಗಳು ಈ ಒಪ್ಪಂದದ ಅನ್ವಯಕ್ಕೆ ಬರುತ್ತವೆ. ಈ ಒಪ್ಪಂದ ಈಗಾಗಲೇ ನೆಲೆಗೊಳಿಸಲಾಗಿರುವ ಮತ್ತು ಆ ತಯಾರಿಕೆಯಲ್ಲಿರುವ ಸೋವಿಯತ್ ss-4, ss-12, ss–20 ಮತ್ತು ss-23 ಕ್ಷಿಪಣಿಗಳೂ ಮತ್ತು ಅಮೇರಿಕದ ಪರ್ಶಿಂಗ್ 14 ಮತ್ತು ಪರ್ಶಿಂಗ್ 2 ಮತ್ತು ಕ್ರ್ಯುಯ್ಸ್‌ಕ್ಷಿಪಣಿಗಳನ್ನು ಒಳಗೊಂಡಿದೆ. ಮೂರು ವರ್ಷಗಳೊಳಗೆ ಈ ವರ್ಗದ ಅಣ್ವಸ್ತ್ರಗಳ ನಾಶ ಮತ್ತು 13 ವರ್ಷಗಳ ಕಾಲ ಇಂತಹ ಅಣ್ವಸ್ತ್ರಗಳತಯಾರಿನಡೆಯದಂತೆ ಪರಸ್ಪರ ಪರೀಕ್ಷಣೆಒಪ್ಪಂದದಲ್ಲಿಸೇರಿದೆ.

ಸ್ವಾಭಾವಿಕವಾಗಿಯೇ ಈ ಒಪ್ಪಂದಕ್ಕೆಜಗತ್ತಿನಾದ್ಯಂತ ಭಾರಿ ಉತ್ಸಾಹ

(8ನೇ ಪುಟ ನೋಡಿ)

ಶೇರ್ ಮಾರ್ಕೆಟ್ ಕುಸಿತ – ಏಕೆ? ಹೇಗೆ?

ಈ ಅಕ್ಟೋಬರ್‌ನಲ್ಲಿ 1929ರ ನಂತರದ ಜಗತ್ತಿನಲ್ಲೇ ಅತ್ಯಂತ ದೊಡ್ಡ ಶೇರ್ ಮಾರ್ಕೆಟ್ ಕುಸಿತ ಸಂಭವಿಸಿತು. ಜಗತ್ತಿನ ಬಂಡವಾಳಶಾಹಿ ದೇಶಗಳ ಮುಖ್ಯ ನಗರಗಳಲ್ಲೆಲ್ಲಾ ಒಂದೇ ಸಮಯಕ್ಕೆ ಈ ಕುಸಿತ ಸಂಭವಿಸಿತು. ಅಕ್ಟೋಬರ್‌ನ ಮೂರು ವಾರಗಳಲ್ಲಿ ಶೇರ್ ಮಾರ್ಕೆಟ್ ಸೂಚಕ ಕಾಲು ಭಾಗದಷ್ಟು ಕುಸಿಯಿತು. ರಾತ್ರೋರಾತ್ರಿ ದೊಡ್ಡ ಬಂಡವಾಳಶಾಹಿಗಳದ್ದು ಮಾತ್ರವಲ್ಲ, ಶೇರು ಹೊಂದಿರುವ ಮಿಲಿಯಾಂತರ ಸಣ್ಣ ಉಳಿತಾಯಗಾರರ ಆಸ್ತಿ ಕಾಲುಭಾಗದಷ್ಟು ಮಾಯವಾಯಿತು.

ಇಂತಹುದೇ ಕುಸಿತ 1929ರಲ್ಲೂ ಆಗಿತ್ತು. ಅದೂ ಅಕ್ಟೋಬರ್‌ನಲ್ಲೇ. ಕುಸಿತ ಸಹ ಹೆಚ್ಚು ಕಡಿಮೆ ಇದೇ ಪ್ರಮಾಣದ್ದಾಗಿತ್ತು — ಸುಮಾರು ಶೇಕಡಾ 30. ಈ ವರೆಗೆ 1929ರ ಮಹಾ ಹಿಂಜರಿತದ ಜತೆ ಹೋಲಿಕೆ ಈಗ ನಡೆಯುತ್ತಿರುವ ಘಟನೆಗಳು 1929 ರೀಪ್ಲೇ (replay) ಎನ್ನುವಂತಿದೆ.

ಅರಾಜಕತೆಗೆ ಪುರಾವೆ

1929ರ ಕುಸಿತದಂತೆ 1987ರ ಕುಸಿತ ಸಹ ಬಂಡವಾಳಶಾಹಿ ಪದ್ಧತಿಯಲ್ಲಿ ಅಡಕವಾಗಿರುವ ಅನಿವಾರ್ಯ ಅರಾಜಕತೆಯನ್ನು ಬಯಲು ಪಡಿಸಿದೆ. ಪದ್ಧತಿಯ ಅತಾರ್ಕಿಕ ಸಂಗತಿಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಕೋಟಿಗಟ್ಟಲೆ ಜನರ ಉದ್ಯೋಗ, ಆದಾಯ, ಜೀವನಕ್ಕೆ ಸಂಬಂಧ ಪಟ್ಟ ಸಂಗತಿಗಳು ಕೆಲವೇ ಕೈಬೆರಳೆಣಿಕೆಯ ಹಣಕಾಸಿನ ವ್ಯವಹಾರ ಮಾಡುವವರ 'ವಿಶ್ವಾಸ ವದಂತಿಗಳು, ಆತಂಕಗಳ ಮೇಲೆ ಅವಲಂಬಿಸಿವೆ. ಇದೆಲ್ಲಾ ಈಗಾಗಲೇ ತಿಳಿದಿರುವ ಸಂಗತಿಯಾದರೂ, ಘಟನೆಗಳು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದವು. ಒಂದೇ ದಿನದಲ್ಲಿ ಬಂಡವಾಳಶಾಹಿ ದೇಶಗಳ ಸಾವಿರಾರು ಮೈಲಿ ದೂರವಿರುವ ನಗರಗಳಲ್ಲಿ ಕೋಟಿಗಟ್ಟಲೆ ಡಾಲರುಗಳ ಐಶ್ವರ್ಯ ಕಾಲು ಭಾಗ ಮಾಯವಾಗುವ ಘಟನೆಗಳು ನಡೆದವು. ಇಂತಹ ಅಚ್ಚರಿಯ ಘಟನೆಗಳಿಗೆ ಕಾರಣ ದೀರ್ಘ ಕಾಲದ ಇತಿಹಾಸಿಕ ಬೆಳವಣಿಗೆಯಲ್ಲಡಗಿದೆ.

ಆರ್ಥಿಕ ಪೈಪೋಟಿ

ಕುಸಿತಕ್ಕೆ ಮೂಲ ಕಾರಣ, ಸಾಮ್ರಾಜ್ಯಶಾಹಿ ದೇಶಗಳ ನಡುವೆ ಆರ್ಥಿಕ ಅನೈಕ್ಯತೆ. 1983ರಲ್ಲಿ ರೇಗನ್ ಅಮೇರಿಕನ್ ಆರ್ಥಿಕತೆಯಲ್ಲಿ ಆರಂಭಿಸಿದ ಉತ್ಕರ್ಷ (boom) ಈ ಅನೈಕ್ಯತೆಯ ಮೇಲೆ ಆಧರಿಸಿದೆ. ಈ ಅನೈಕ್ಯತೆಯ ಪರಿಣಾಮಗಳನ್ನು ಕಂಡ ಶೇರುದಾರರ ಅವಿಶ್ವಾಸ, ಆತಂಕಗಳೂ ಕುಸಿತಕ್ಕೆ ಮುಖ್ಯ ಕಾರಣ.

ಅಮೇರಿಕನ್ ಉತ್ಕರ್ಷ ದೇಶದೊಳಗಣ ಬೇಡಿಕೆಯನ್ನು ಏರಿಸುವುದರಿಂದ ಆಯಿತು. ಬೇಡಿಕೆಯನ್ನು ಅಂಶಿಕವಾಗಿ ಉತ್ಪಾದನೆ ಹೆಚ್ಚಳದಿಂದಲೂ, ದೊಡ್ಡ ಭಾಗ ಬಂಡವಾಳ ಆಮದಿನ ಸಹಾಯದ ಕೊಳ್ಳುವಿಕೆಯಿಂದ ಪೂರೈಸಲಾಯಿತು. ಬಂಡವಾಳದ ಆಮದನ್ನು ಹೆಚ್ಚಿನ ಬಡ್ಡಿದರದಿಂದ ಆಕರ್ಷಿಸಲಾಯಿತು. ಅಮೇರಿಕದ ವ್ಯಾಪಾರದ ಕೊರತೆ (ರಫ್ತಿಗಿಂತ ಹೆಚ್ಚಿನ ಆಮದು) ಇದ್ದಾಗ್ಯೂ, ಡಾಲರು ಸ್ಟಾಕು ಮತ್ತು ಠೇವಣಿ ಇಟ್ಟುಕೊಳ್ಳುವ ವಿದೇಶಿ ಶೇರುದಾರರ ಆಸಕ್ತಿಯಿಂದ ಡಾಲರು ಬೆಲೆ ಹೆಚ್ಚಾಗುತ್ತಾ ಹೋಯಿತು.

ಡಾಲರ್ ಕುಸಿತ

ಆದರೆ ಇದು ಹೆಚ್ಚು ಕಾಲ ನಡೆಯಲಿಲ್ಲ. ಅಮೇರಿಕನ್ ವ್ಯಾಪಾರದ ಕೊರತೆ ಜಾಸ್ತಿಯಾಗುತ್ತಾ ಹೋದಂತೆ ಡಾಲರ್‌ನ ಮೇಲೆ ವಿಶ್ವಾಸ ಕಡಿಮೆಯಾಗುತ್ತಾ ಹೋಯಿತು. ಇದರಿಂದ ಡಾಲರ್ ಕುಸಿಯಲು ಆರಂಭಿಸಿತು. ಒಂದು ಬಾರಿ ಕುಸಿತ ಆರಂಭವಾದ ಮೇಲೆ, ಹೆಚ್ಚಾಗುತ್ತಾ ನಡೆಯಿತು. ವ್ಯಾಪಾರದ ಕೊರತೆ ಸಹ ಕಡಿಮೆಯಾಗಲಿಲ್ಲ. ಇದು 1700 ಶತ ಕೋಟಿ ಡಾಲರುಗಳನ್ನು ಮುಟ್ಟಿದೆ. ಡಾಲರು ಕುಸಿತ ಜಪಾನಿ ಮತ್ತು ಪ.ಜರ್ಮನ್ ಬಂಡವಾಳ ಆಮದನ್ನು ತಡೆಯಲಿಲ್ಲ. ಸಾಮಾನ್ಯವಾಗಿ ಒಂದು ದೇಶದ ನಾಣ್ಯ ಕುಸಿದರೆ, ಬಂಡವಾಳ ಏರುತ್ತಿರುವ ನಾಣ್ಯದ ದೇಶಗಳ ಕಡೆ ಹೋಗುತ್ತದೆ.

ಆದರೆ ಡಾಲರ್ ಕುಸಿತದಿಂದ ಇಂತಹ ಪರಿಣಾಮವಾಗಲಿಲ್ಲ. ಅಂತರಾಷ್ಟ್ರೀಯ ಶೇರುದಾರರು ಎಲ್ಲಾ ಬಂಡವಾಳಶಾಹಿ ದೇಶಗಳ ಸ್ಟಾಕು ಮತ್ತು ಶೇರುಗಳಲ್ಲಿ 'ಅವಿಶ್ವಾಸ' ಹುಟ್ಟುವಂತೆ ಮಾಡಿತು. ಯಾವುದೇ ದೇಶದ ಸ್ಟಾಕು, ಶೇರುಗಳಿಗಿಂತ ಬೇರೆ ರೀತಿಯ ಐಶ್ವರ್ಯ ಸಂಗ್ರಹಿಸಿಡುವ ವಿಧಾನಗಳು–ಚಿನ್ನ, ಸಾಮಗ್ರಿಗಳು, ಭೂಮಿ ಇತ್ಯಾದಿ–ಹೆಚ್ಚು ಆಕರ್ಷಕವಾಗಿವೆ.

ಡಾಲರ್‌ನ ಕುಸಿತದಿಂದ ಆರಂಭವಾದ ಆತಂಕ ಇನ್ನೊಂದು ಬೆಳವಣಿಗೆಯಿಂದ ಇನ್ನೂ ಹೆಚ್ಚಾಯಿತು. ಜಗತ್ತಿನ ಬಂಡವಾಳಶಾಹಿ ದೇಶಗಳಲ್ಲಿ ಬೆಳವಣಿಗೆ ಸ್ಥಗಿತತೆಯ ಮಜಲು ಆರಂಭವಾಗುತ್ತವೆ ಎಂದು ಹಲವು ಕಡೆಗಳಿಂದ ಕೇಳ ಬರುತ್ತಿರುವ ಅಭಿಪ್ರಾಯ ಶೇರುದಾರರ "ಅವಿಶ್ವಾಸ" ವನ್ನು ಹೆಚ್ಚಿಸಿದೆ.

ಡಾಲರ್‌ನ ಗಮನಾರ್ಹ ಪಾತ್ರ

ಕುಸಿತವನ್ನು ಇನ್ನೊಂದು ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಖಾಸಗಿ ಮಾಲತತ್ವದ ಮೇಲೆ ಅವಲಂಭಿಸಿರುವ ಆರ್ಥಿಕತೆಯಲ್ಲಿ,ಐಶ್ವರ್ಯವನ್ನು ಸಂಗ್ರಹಿಸುವ ರೂಪದಲ್ಲಿ ಮಾಲಕರಿಗೆ "ವಿಶ್ವಾಸ" ಇರಬೇಕು. ಶೇರು, ಸ್ಟಾಕು ಆಧುನಿಕ ಬಂಡವಾಳಶಾಹಿ ಜಗತ್ತಿನಲ್ಲಿ ಐಶ್ವರ್ಯ ಸಂಗ್ರಹಿಸುವ ಪ್ರಮುಖ ರೂಪ. ಆದ್ದರಿಂದ ಇವುಗಳ ಮಾರುಕಟ್ಟೆಯಬೆಲೆ ಮುಖ್ಯವಾದುದು ಇವರಿಗೆ.

ಹಿಂದೆ ಯಾವುದೇ ಐಶ್ವರ್ಯಚಿನ್ನದ ಜೊತೆ ಹೋಲಿಕೆಯಲ್ಲಿ ಅಳೆಯಲ್ಪಡುತ್ತಿತ್ತು. ಚಿನ್ನದ ಪಾತ್ರವನ್ನು ಎರಡನೇ ಮಹಾ ಯುದ್ಧದ ನಂತರದ ಅವಧಿಯಲ್ಲಿ ಡಾಲರು ಪಡೆದು

ಈ ಅಕ್ಟೋಬರ್‌ನಲ್ಲಿ 1929ರ ನಂತರದ ಜಗತ್ತಿನಲ್ಲೇ ಅತ್ಯಂತ ದೊಡ್ಡ ಶೇರು ಮಾರ್ಕೆಟ್ ಕುಸಿತ ಸಂಭವಿಸಿತು. ಜಗತ್ತಿನ ಬಂಡವಾಳಶಾಹಿ ದೇಶಗಳ ಮುಖ್ಯ ನಗರಗಳಲ್ಲೆಲ್ಲಾ ಒಂದೇ ಸಮಯಕ್ಕೆ ಈ ಕುಸಿತ ಸಂಭವಿಸಿತು.

ಕೊಂಡಿತು. 1946 ರಿಂದ 1971ರ ವರೆಗೆ ಚಿನ್ನದ ಜತೆ ಹೋಲಿಕೆಯಲ್ಲಿ ಸ್ಥಿರ ಬೆಲೆ ಡಾಲರು ಹೊಂದಿದ್ದೇ ಇದಕ್ಕೆ ಕಾರಣ. ಆದ್ದರಿಂದ ಡಾಲರಿನ ಸ್ಥಿರತೆಯ ಮೇಲೆ, ಬಂಡವಾಳಶಾಹಿ ವ್ಯವಸ್ಥೆಯ ಸ್ಥಿರತೆ ಬಗ್ಗೆ ಖಾಸಗಿ ಮಾಲಕರ ಭರವಸೆ ಹೊಂದಿಕೊಂಡಿದೆ. ಡಾಲರಿನ ಪ್ರಾಮುಖ್ಯತೆ ಜಪಾನ್, ಪ.ಜರ್ಮನಿ ಆರ್ಥಿಕವಾಗಿ ಬಲಗೊಂಡದ್ದರಿಂದ ಅಷ್ಟೇನೂ ವ್ಯತ್ಯಾಸವಾಗಿಲ್ಲ. ಆದ್ದರಿಂದ ಡಾಲರ್ ಕುಸಿತ ಇಡೀ ಬಂಡವಾಳಶಾಹಿ ಜಗತ್ತನ್ನೇ ಅಲುಗಾಡಿಸುತ್ತದೆ.

ಹಿತಾಸಕ್ತಿಗಳ ಘರ್ಷಣೆ

ಡಾಲರು ಕುಸಿತ ಸಂಭವಿಸುತ್ತಿರುವುದು ಬಲಾಢ್ಯ ಸಾಮ್ರಾಜ್ಯಶಾಹಿ ದೇಶಗಳ ನಡುವೆ ನಡೆಯುತ್ತಿರುವ ಹಿತಾಸಕ್ತಿಗಳ ಘರ್ಷಣೆಯಲ್ಲ ಎನ್ನುವುದೂ ಮುಖ್ಯ ಅಂಶ. ತನ್ನ ವ್ಯಾಪಾರ ಕೊರತೆ ಕಡಿಮೆ ಮಾಡಲು ಬೇಕೆಂತಲೇ ರೇಗನ್ ಆಡಳಿತ ಡಾಲರ್ ಕುಸಿತ ತಡೆಯಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಫೆಬ್ರವರಿಯ ಒಪ್ಪಂದ ಪ್ರಕಾರ ಏಳು ಬಂಡವಾಳಶಾಹಿ ದೇಶಗಳ ಕೇಂದ್ರೀಯ ಬ್ಯಾಂಕುಗಳು ಡಾಲರ್‌ನ್ನು ಸ್ಥಿರಗೊಳಿಸಲು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅಮೇರಿಕ ಈ ಒಪ್ಪಂದದಂತೆಯಾವುದೇ ಕ್ರಮ ತೆಗೆದುಕೊಂಡಿಲ್ಲ ಮಾತ್ರವಲ್ಲ, ಈ ಒಪ್ಪಂದ ಬದಲಾಯಿಸಲು ಸಮ್ಮೇಳನ ಪುನಃ ಕರೆಯಬೇಕೆಂದು ಒತ್ತಾಯಿಸಿದೆ. ಅಮೇರಿಕ ಡಾಲರ್ ಕುಸಿತವನ್ನು ಪಯೋಗಿಸಿ ಇತರ ಸಾಮ್ರಾಜ್ಯಶಾಹಿ ದೇಶಗಳ ಮಾರುಕಟ್ಟೆಕುಸಿಯಲು ಪ್ರಯತ್ನಿಸುತ್ತಿದೆ. ಈ ದೇಶಗಳ ನಡುವೆ ಇಂತಹ ಪೈಪೋಟಿಯೇ ಶೇರು ಮಾರ್ಕೆಟ್ "ಅವಿಶ್ವಾಸ" ಕ್ಕೆ ಕಾರಣ. ಸಾಮ್ರಾಜ್ಯಶಾಹಿ ದೇಶಗಳು ಈ ಬಿಕ್ಕಟ್ಟಿನಿಂದ ಹೊರ ಬರಲು ಒಂದು ಒಪ್ಪಂ... ಬಂದಿಲ್ಲ ಮಾತ್ರವಲ್ಲ, ತನ್ನ ಒಳಿಗಾಗಿ ಇತರ ದೇಶಗಳನ್ನು ಭಿಕಾರಿ ಮಾಡುವುದಕ್ಕೂ ಹೇಸುತ್ತಿಲ್ಲ. 1929ರ ಸುಮಾರಿಗೂ ಇಂತಹುದೇ ಘಟನಾವಳಿಗಳು ನಡೆದಿದ್ದವು. ಒಂದು ಸಾಮ್ರಾಜ್ಯಶಾಹಿ ಇನ್ನೊಂದನ್ನು ಸೋಲಿಸಲು ಪ್ರಯತ್ನಿಸುವ ಮೂಲಕ ಇಡೀ ಸಾಮ್ರಾಜ್ಯಶಾಹಿ ವ್ಯವಸ್ಥೆ ಕುಸಿಯುತ್ತಿದೆ. ಈ ರೀತಿ ನಡೆಯದಿದ್ದರೆ, ಬಹುಶಃ ನಾವುಅದನ್ನು ಬಂಡವಾಳಶಾಹಿ ಎಂದು ಕರೆಯುವುದಿಲ್ಲ.

ಎರಡು ಪರಿಹಾರಗಳು

ಶೇರು ಕುಸಿತಕ್ಕೆ ಎರಡು ಪರಿಹಾರಗಳನ್ನು ಸೂಚಿಸಲಾಗುತ್ತಿದೆ. ಒಂದು ರೇಗನ್‌ರ ಪರಿಹಾರವಾದರೆ,ಇನ್ನೊಂದು ಉಳಿದ ಸಾಮ್ರಾಜ್ಯಶಾಹಿ ದೇಶಗಳದ್ದು. ಬಡ್ಡಿದರಗಳನ್ನು ಇಳಿಸಿ ಡಾಲರು ಬೆಲೆ ಇನ್ನೂ ಇಳಿಸಿದರೆ ಆರ್ಥಿಕ ಹಿಂಜರಿತದ ಭಯ ನಿವಾರಿಸಬಹುದು, ಇದರಿಂದ ಶೇರುದಾರರ ಆತಂಕ ನಿವಾರಿಸಿ ಕುಸಿತವನ್ನು ತಡೆಯಬಹುದು ಎಂಬುದು ರೇಗನ್ ಪರಿಹಾರ. ಆದರೆ ಉಳಿದದೇಶಗಳು ರೇಗನ್ ಡಾಲರ್‌ನ್ನು ಸ್ಥಿರಗೊಳಿಸುವ ಕ್ರಮಕ್ಕೆ ಪ್ರಾಮುಖ್ಯತೆ ಕೊಟ್ಟರೆ ಮಾತ್ರ ಶೇರುದಾರರ 'ವಿಶ್ವಾಸ' ಮರಳಿ ಬರಲು ಸಾಧ್ಯ ಎಂದು ವಾದಿಸುತ್ತಾರೆ. ಅಂದರೆ ಹೆಚ್ಚಿನ ತೆರಿಗೆಗಳು, ಕಡಿಮೆ ಖರ್ಚು, ಹೆಚ್ಚಿನ ಬಡ್ಡಿದರ ತಂದು ಬಜೆಟ್ ಕೊರತೆ ಮಾಡಬೇಕೆಂದು ಅವರವಾದ.

ಈ ಎರಡು ವಾದಗಳಲ್ಲೂ ಸ್ವಲ್ಪ ಮಟ್ಟಿಗೆ ಹುರುಳಿದೆ. ಆದರೆ ವಿರೋಧಾಭಾಸವೂ ಇದೆ. ಆದರೆ ಎರಡು ಪರಿಹಾರಗಳಿಂದ ಬಂಡವಾಳಶಾಹಿ ಈ ಬಿಕ್ಕಟ್ಟಿನಿಂದ ಪರಿಹಾರ ನೀಡಲಾರವು. ಈ ಅಭಿಪ್ರಾಯ ಅಥವಾ ಅನ್ನಿಸಿಕೆಯೇ ನಿಜವಾಗಿಯೂ ಹೇಳಬೇಕಾದರೆ ಶೇರು ಮಾರ್ಕೆಟ್ ಕುಸಿತಕ್ಕೆ ಮುಖ್ಯಕಾರಣ.

ಇದರಿಂದ ಬಂಡವಾಳಶಾಹಿ ಆರ್ಥಿಕತೆ ದೀರ್ಘಕಾಲದ ಆಳವಾದ ಹಿಂಜರಿತಕ್ಕೆಡೆ ಕೊಡಬಹುದು ಎಂಬುದು ಸಾಮಾನ್ಯ ಅಭಿಪ್ರಾಯ. ಇದನ್ನು ಖಡಾಖಂಡಿತವಾಗಿ ಹೇಳುವುದು ಕಷ್ಟವಾದರೂ ಅಂತಹ ಸ್ಪಷ್ಟ ಲಕ್ಷಣಗಳು ಗೋಚರಿಸುತ್ತಾ ಇವೆ. ಏನೇ ಇರಲಿ, ಸ್ಟಾಕ್ ಮಾರ್ಕೆಟ್ ಚೇತರಿಸಿಕೊಂಡರೂ ಈ ಕುಸಿತದ ಕಹಿ ಅನುಭವ ಇನ್ನೂ ಬಹಳಷ್ಟು ಕಾಲ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುವುದು ಖಂಡಿತ.

ಡಾಲರ್ ಕುಸಿತ ಮುಂದುವರಿದರೆ, ಶೇರು ಮಾರ್ಕೆಟ್ ಕುಸಿತ ಮುಂದುವರಿಯುವುದು ಖಚಿತ. ಯಾಕೆಂದರೆಇವೆರಡೂ ಪೂರಕ ಪ್ರಕ್ರಿಯೆಗಳು 1929ರಂತಹಆರ್ಥಿಕ ಕುಸಿತದ ಭೂತವಂತೂ ಕತ್ತಲಲ್ಲ ಅಣಿಯಾಗಿದೆ.

ಬೂರ್ಜ್ವಾ ಸಿದ್ಧಾಂತಗಳ ದಿವಾಳಿ

ಇಡೀ ಘಟನಾವಳಿ ಬೂರ್ಜ್ವಾ ಸಿದ್ಧಾಂತಗಳ ಜೊಳ್ಳನ್ನು ಬಯಲು ಪಡಿಸಿದೆ. 1930ರ ಬಿಕ್ಕಟ್ಟಿನ ನಂತರ ಕೈನೇಸ್ ಎಂಬ ಅರ್ಥಶಾಸ್ತ್ರಜ್ಞ ಸಿದ್ಧಾಂತ ಫ್ಯಾಷನ್ ಆಯಿತು. ಈ ಸಿದ್ಧಾಂತದ ಪ್ರಕಾರ, ಬಂಡವಾಳಶಾಹಿ ಪದ್ಧತಿಯಲ್ಲಿ ಬಿಕ್ಕಟ್ಟು ಆಗಾಗ ಉಂಟಾದರೂ ಪ್ರಭುತ್ವದ ಮಧ್ಯಪ್ರವೇಶದಿಂದ ವ್ಯವಸ್ಥೆಯನ್ನು ಬಿಕ್ಕಟ್ಟು ರಹಿತ ಮಾಡುವುದು ಸಾಧ್ಯ. ಆದರೆ ಈ 'ಪರಿಹಾರ' ಹಣದುಬ್ಬರದಂತಹ ಹೊಸ ಸಮಸ್ಯೆ ತಂದೊಡ್ಡುವುದರಿಂದ ಈ ಸಿದ್ಧಾಂತದ ವಿರುದ್ಧವಾದ ಸಿದ್ಧಾಂತ ಬಳಕೆಗೆ ಬಂತು. ಇದರ ಪ್ರಕಾರ ಪ್ರಭುತ್ವದ ಮಧ್ಯಪ್ರವೇಶವೇ ಬಿಕ್ಕಟ್ಟಿಗೆ ಕಾರಣ. ಮುಕ್ತ ಮಾರುಕಟ್ಟೆಯ ಶಕ್ತಿಗೆ ಬಿಟ್ಟರೆ ಬಂಡವಾಳಶಾಹಿ ವ್ಯವಸ್ಥೆ ಚೆನ್ನಾಗಿ ಕೆಲಸ ಮಾಡಬಲ್ಲದು. ಆದರೆ ಈಗಿನ ಬಿಕ್ಕಟ್ಟಿಗೆ ಪ್ರಭುತ್ವ ಮಧ್ಯಪ್ರವೇಶ ಮಾಡುವುದೇ ಪರಿಹಾರ ಎಂದು ಹಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯ, ಆದ್ದರಿಂದ ಈ ಕುಸಿತ ಈ ಎರಡೂ ಸಿದ್ಧಾಂತದ ಜೊಳ್ಳನ್ನು ಬಯಲುಪಡಿಸಿದೆ. ಕುಸಿತ ಈ ವ್ಯವಸ್ಥೆಯ ಅವಿಭಾಜ್ಯ ಅಂಶ ಎಂದು ಜನ ಸಾಮಾನ್ಯರಿಗೆ ಮನದಟ್ಟು ಮಾಡಿಸುವುದುನಮ್ಮ ಕರ್ತವ್ಯವಾಗಬೇಕು.

ಫೈಸಿಂಗ್‌ಗೆ ನಿಜಸಂಗತಿ ಅರಿವಾಗುತ್ತಿದೆ ?

ತನ್ನನ್ನು ಕೇಂದ್ರ ಸರ್ಕಾರ ತಪ್ಪುದಾರಿಗೆಳೆದು ಮೋಸ ಮಾಡಿದೆ ಎಂಬ ಭಾವನೆ ಜಿ.ಎನ್.ಎಲ್.ಎಫ್. ಮುಖಂಡ ಸುಭಾಸ್ ಫೈಸಿಂಗ್‌ರಲ್ಲಿ ಉಂಟಾಗುತ್ತಿದೆಯಂತೆ. ಬಹಳ ಹಿಂದೆ ಡಾರ್ಜಿಲಿಂಗ್ ಗುಡ್ಡಗಾಡು ಜಿಲ್ಲೆಗೆ ಸ್ವಾಯತ್ತತೆ ನೀಡಬೇಕೆಂದು ಸಿ.ಪಿ.ಐ.(ಎಂ) ಸಂಸತ್ ಸದಸ್ಯ ಆನಂದ್ ಪಾಠಕ್ ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯ ವ್ಯಾಪಕತೆಯ ಬಗ್ಗೆ ತನಗೆ ತಪ್ಪು ಸಲಹೆ ನೀಡಲಾಗಿತ್ತು ಎಂದು ಅವರು ತಮ್ಮ ಗೆಳೆಯರಿಗೆ ಹೇಳುತ್ತಿದ್ದಾರೆಂದು ಕಲ್ಕತ್ತೆಯ "ಸಂಡೇ" ಪತ್ರಿಕೆ ಹೇಳಿದೆ. ಈ ಸಲಹೆ ನೀಡಿದ ಇಂದರ್‌ಜಿತ್ ಎಂಬ ಪತ್ರಕರ್ತ ನಿಜವಾಗಿ ಕೇಂದ್ರ ಸರ್ಕಾರದ ಗೃಹ ಇಲಾಖೆಯ ಏಜೆಂಟ್ ಎಂದೂ ಆತ ಹೇಳಿದ್ದಾರಂತೆ, ಕೇಂದ್ರ ಸರ್ಕಾರ ಗುಡ್ಡಗಾಡು ಜನರ ಅಜ್ಞಾನದ ದುರ್ಲಾಭ ಪಡೆಯುತ್ತಿದೆ, ಜ್ಯೋತಿಬಸು ದೇಶದಲ್ಲೇ ಅತ್ಯುತ್ತಮ ಮುಖ್ಯ ಮಂತ್ರಿ ಎಂದು ತಾನು ಹಿಂದೆಯೇ ಹೇಳಿದ್ದೇನೆಂದು ಫೈಸಿಂಗ್ ಹೇಳುತ್ತಿರುವುದಾಗಿ ಆ ಪತ್ರಿಕೆ ತಿಳಿಸಿದೆ.

'ದೆಹಲಿ ಚಲೋ' ಗೆ ದೇಶಾದ್ಯಂತ ಹುರುಪಿನ ಪ್ರತಿಕ್ರಿಯೆ

ಡಿಸೆಂಬರ್ 9 ರಂದು ನವ ದೆಹಲಿಯಲ್ಲಿ ಒಟ್ಟು ಸೇರಿದ ಆರು ಜಾಥಾಗಳಿಗೆ ಮಾರ್ಗದುದ್ದಕ್ಕೂ ದೇಶಾದ್ಯಂತ ಅಪೂರ್ವ ಪ್ರತಿಕ್ರಿಯೆ ವ್ಯಕ್ತಪಟ್ಟಿದೆ. ವಿವಿಧ ಜಾಥಾಗಳ ಪೂರ್ಣ ವರದಿ ಇನ್ನೂ ಸಿಕ್ಕಿಲ್ಲವಾದರೂ ಜಾಥಾ ಆರಂಭವಾದ 20 ದಿನಗಳಲ್ಲಿ ಒಟ್ಟು 2000 ಕ್ಕೂ ಹೆಚ್ಚು ಸಭೆಗಳಲ್ಲಿ 70 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆ ಎಂದು ತಿಳಿದು ಬಂದಿದೆ. ದೇಶಾದ್ಯಂತ ಈ ಜಾಥಾಗಳು ಒಂದು ಹೊಸ ಹುರುಪನ್ನು ತುಂಬಿವೆ. ದಕ್ಷಿಣ ಭಾರತದ ಎರಡು ಜಾಥಾಗಳ ಬಗ್ಗೆ ಸ್ಥೂಲವಾಗಿ ಕಳೆದ ಸಂಚಿಕೆಗಳಲ್ಲಿ ಓದಿದ್ದೀರಿ. ಉಳಿದ ನಾಲ್ಕು ಜಾಥಾಗಳ ಮುನ್ನಡೆಯ ಒಂದು ಪಕ್ಷಿ ನೋಟ ಇಲ್ಲಿದೆ.

ಕಲ್ಕತ್ತಾ ಜಾಥಾಕ್ಕೆ ಬಿಹಾರ್, ಉತ್ತರ ಪ್ರದೇಶಗಳಲ್ಲಿ ಭಾರೀ ಸ್ವಾಗತ

ಕಲ್ಕತ್ತಾದಿಂದ ನವಂಬರ್ 16 ರಂದು ಆರಂಭವಾದ ಅಖಿಲ ಭಾರತ ಜಾಥಕ್ಕೆ ಸಿದು ಕಾನು ದಹಾರ್‌ನ ಲೆನಿನ್ ಪ್ರತಿಮೆ ಎದುರು ಸಾವಿರಾರು ಜನಭಾರೀ ಬೀಳ್ಕೊಡುಗೆ ನೀಡಿದರು. ಇದರ ನಾಯಕತ್ವ ಸಿ.ಪಿ.ಐ. (ಎಂ) ಪಾರ್ಲಿಮೆಂಟ್ ಸದಸ್ಯ ಮುಸೂದುಲ್ ಹುಸೇನ್ ಸಿ.ಪಿ.ಐ. ಪಾರ್ಲಿಮೆಂಟ್ ಸದಸ್ಯ ಗುರುದಾಸ್ ದಾಸಗುಪ್ತ,ಸಿ.ಐ ಟಿ.ಯು. ನಾಯಕ ನಿರ್ಮಲ ಮುಖರ್ಜಿ ಇವರುಗಳು ವಹಿಸಿದ್ದರು. ಜಾಥಾ ಕಲ್ಕತ್ತದ ಡೈಮಂಡ್ ಬ್ರಿಜ್, ಹುಗ್ಲಿ ಜಿಲ್ಲೆಯ ಪಾಂಡುವಾ ದುರ್ಗಾಪುರ, ಅಸ್ಸನ್ ಸೋಲ್ ಜಿಲ್ಲೆಯ ಮೂಲಕ ಹಾದು ಬಿಹಾರವನ್ನು ನವಂಬರ್ 17ರಂದು ಧನ್‌ಬಾದ್ ಜಿಲ್ಲೆಯ ನಿಸಾರ್‌ದಲ್ಲಿ ಪ್ರವೇಶಿಸಿತು. ಮೈಥಾನ್ ಅಣೆಕಟ್ಟು ಪ್ರದೇಶದಲ್ಲಿ, ಜಾಥಾ ನಡೆಸುತ್ತಿರುವ ಎಡ ಪಕ್ಷಗಳ ಜತೆಗೆ ದಾಮೋದರ ಕಣಿವೆ ಕಾರ್ಪೊರೇಷನ್ ಶ್ರಮಿಕ ಯೂನಿಯನ್ ಸಹ ಸೇರಿಕೊಂಡಿತ್ತು. ನಿಸಾರ್ ಕಲ್ಲಿದ್ದಲು ಗಣಿಯಲ್ಲಿ ಭವ್ಯ ಸ್ವಾಗತ ಸ್ವೀಕರಿಸಿ ಧನಬಾದ್, ಬೊಕಾರೋ ಉಕ್ಕಿನ ನಗರಗಳ ಮೂಲಕ ಹಾದು ಹೋಯಿತು.

ನವಂಬರ್ 18ರಂದು ಬೊಕಾರೋನಿಂದ ಹೊರಟು ಗಿರಿಧಿ, ದೇವಘರ್ ತಲುಪಿತು. ದಾರಿಯುದ್ದಕ್ಕೂ ಕಲ್ಲಿದ್ದಲು ಗಣಿ ಕಾರ್ಮಿಕರು, ಯುವಕರು, ವಿದ್ಯಾರ್ಥಿಗಳು, ರೈತರು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದ ಬಹಿರಂಗ ಸಭೆಗಳು ನಡೆದವು.

ನವಂಬರ್ 19ರಂದು ಜಾಥಾ ಬಿಹಾರದಲ್ಲೇ ಬೈನ್ಸಿ, ಬರಾಹರ್, ಪುನ್‌ಸೀಚಾಗಳನ್ನು ಹಾದು ರಾತ್ರಿಗೆ ಭಾಗಲ್ಪುರ ತಲುಪಿತು. ಜಾಥಾಕ್ಕೆ ಎಲ್ಲಾ ಕಡೆ ಒಳ್ಳೆಯ ಬೆಂಬಲ ದೊರಕಿತು.

ನವಂಬರ್ 20ರಂದು ಜಾಥಾ ಬಿಹಾರದಲ್ಲೇ ಮುಂದುವರಿಯಿತು. ಜಾಥಾದ ಅಂಗವಾಗಿ ಸುಲ್ತಾನ್‌ಗಂಜ್ ಮುಂಘೇರ್, ಲಖಿಸಾರ್, ಮಾರಾಚಿ, ಬಿಹಾತ್,ಬೇಗುಸಾರಾಯ್‌ಗಳಲ್ಲಿ ಭಾರಿ ಸಭೆಗಳನ್ನು ನಡೆಸಿ, ಬರೌನಿಗೆ ತಲುಪಿತು.

ನವಂಬರ್ 21ರಂದು ಜಾಥಾ ಪಾಟ್ನಾದತ್ತ ನಡೆಯಿತು. ಮೊಕಾಮ,ಬಹಾಂಪುರ, ಮೊರೆ,ಪಂಡಾರಕ್ ಬಾರ್ ಫತುಹಗಳನ್ನು ಹಾದು ಸಂಜೆ ಹೊತ್ತಿಗೆ ಪಾಟ್ನಾದ ಅದಾಲತ್‌ಗಂಜ್ ಮೈದಾನ ಸೇರಿತು. ಪಾಟ್ನಾದಲ್ಲಿ ಜಾಥಾ ಅಂಗವಾಗಿ ಭಾರಿ ಬಹಿರಂಗ ಸಭೆ ನಡೆಯಿತು.

ನವಂಬರ್ 22ರಂದು ಪಾಟ್ನಾದಿಂದ ಹೊರಟು ಬಿಹ್ತಾ, ದಾಶಿವಾನೆ, ಬಿಕಂ, ದುಲ್ಹಿನ್ ಇತ್ಯಾದಿಗಳ ಮೂಲಕ ಔರಂಗಬಾದ್ ತಲುಪಿತು. ಪಾಟ್ನಾದಲ್ಲಿ ಹುತಾತ್ಮರ ಪ್ರತಿಮೆಯ ಮುಂದೆ, ಬಿಹತಾದಲ್ಲಿ ಕಿಸಾನ ಸಭಾದ ಸಂಸ್ಥಾಪಕ ನಾಯಕ ಸ್ವಾಮಿ ಸಹಜಾನಂದ ಸರಸ್ವತಿಯವರ ಸಮಾಧಿಯ ಮುಂದೆ, ನಿಂತು ಜಾಥಾ ತನ್ನ ಶ್ರದ್ಧಾಂಜಲಿ ಅರ್ಪಿಸಿತು. ಇತ್ತೀಚೆಗೆ ನರಮೇಧ ನಡೆದ ಅರ್‌ವಾಲ್‌ದಲ್ಲೊಂದು ಭಾರಿ ಸಭೆ ನಡೆಸಲಾಯಿತು. ಅರವಾಲಕ್ಕೆ ಜಾಥಾ ನಡೆಸುವ ಜಾಗಕ್ಕೆ ಎಸ್. ಎಫ್.ಐ. ಸದಸ್ಯರು ಭಾರಿ ಸಂಖ್ಯೆಯಲ್ಲಿ ಸೈಕಲ್ ಜಾಥಾ ಮೂಲಕ ಬಂದರು.

ನವಂಬರ್ 23ರಂದು ಬಿಹಾರದಲ್ಲೇ ಸಾಸಾರ್‌ರಾಂ ನತ್ತ ಜಾಥಾ ಹೊರಟಿತು. 1984ರಿಂದ ಕಾನೂನು ಬಾಹಿರವಾಗಿ ಮುಚ್ಚಿರುವ ರೊಹತಾಸ್ ಕೈಗಾರಿಕ ಸಂಕೀರ್ಣದ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಜಾಥಾದ ಕಾರ್ಯಕ್ರಮಗಳಲ್ಲಿ ಪಾಲುಗೊಂಡರು.

ನವಂಬರ್ 24 ಜಾಥಾಕ್ಕೆ ಬಿಹಾರದಲ್ಲಿ ಕೊನೆಯ ದಿನವಾಗಿತ್ತು. ಬಿಹಾರದಲ್ಲಿ ಜಾಥಾ ಇದ್ದ ಎಂಟು ದಿನಗಳಲ್ಲಿ, ಬಿಹಾರದ 39 ಜಿಲ್ಲೆಗಳಲ್ಲಿ 13 ಜಿಲ್ಲೆಗಳಲ್ಲಿ ಜಾಥಾದ ಸಂದೇಶ ತಲುಪಿಸಲು ಸಾಧ್ಯವಾಯಿತು.

ನವಂಬರ್ 25 ರಂದು ಬಿಹಾ ಬಿಟ್ಟು, ಉತ್ತರ ಪ್ರದೇಶದ ಘಾಜಿಪುರ್‌ನ್ನು ತಲುಪಿತು.

ಪಂಜಾಬ್‌ನಿಂದ ಎರಡು ಜಾಥಾಗಳು

ಪಂಜಾಬಿನಿಂದ ಎರಡು ಜಾಥಾಗಳು ಆರಂಭವಾದವು. ಒಂದು ಅಮೃತಸರದಿಂದ, ಇನ್ನೊಂದು ಹುಸೈನಿವಾಲಾದಿಂದ. ಅಮೃತಸರ ಜಾಥಾದ ನಾಯಕತ್ವವನ್ನು ಸಿ.ಐ.ಟಿ.ಯು. ನಾಯಕ ಮತ್ತು ಭಗತ್‌ಸಿಂಗ್ ಸಂಗಾತಿ ಪಂಡಿತ್ ಕಿಶೋರಿ ಲಾಲ್ ಮತ್ತು ಎ.ಐ.ಟಿ.ಯು.ಸಿ. ನಾಯಕ ಮದನ್ ಲಾಲ್ ದಿದಿ ವಹಿಸಿದ್ದರು. ನವಂಬರ್ 29ಕ್ಕೆ ಜಾಥಾ ಮೊದಲನೆಯದಾಗಿ ಪ್ರಖ್ಯಾತ ಜಲಿಯನ್‌ವಾಲಾ ಬಾಗ್‌ಗೆ ತೆರಳಿತು. ಅದರ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆನಂತರ ಪುತ್ಲಿಘರ್ ಚೌಕ್‌ನಲ್ಲಿ ಸಾವಿರಾರು ಕಾರ್ಮಿಕರು ಸೇರಿದ ಭಾರಿ ಸಭೆಯಲ್ಲಿ ಜಾಥಾವನ್ನು ಬೀಳ್ಕೊಡಲಾಯಿತು. ಕಾ. ಸಮರ್ ಮುಖರ್ಜಿ ಜಾಥಾ ಮಹತ್ವವನ್ನು ತಿಳಿಸಿ ಹೇಳಿದರು.

ಅಮೃತಸರ ಜಾಥಾ ಕರ್ತಾರಪುರ ಜಲಂಧರ್, ಜಾಗ್ರವಾಸ್, ರಾಯಕೋಟ್, ಸಾರಭ, ಲುಧಿಯಾನ, ಖನ್ನಾ, ಇತ್ಯಾದಿಗಳ ಮೂಲಕ ಹಾದು ಚಂಡೀಘರವನ್ನು ಡಿಸೆಂಬರ್ 3 ಸೇರಿತು.

ಹುಸೇನಿವಾಲಾ ಜಾಥಾದ ನಾಯಕತ್ವವನ್ನು ಮೋಹನ್ ಸಿಂಗ್ ಜಂಡಿಯಾಲಾ (ರಾಜ್ಯ ಕಿಸಾನ ಸಭಾ ನಾಯಕ), ಸುರಿಜಿತ್‌ಸಿಂಗ್ ಬಹಗಲಿ (ಸಿ.ಪಿ.ಐ.ನ ಕಿಸಾನ ಸಭಾ) ಇತ್ಯಾದಿ ನಾಯಕರು ವಹಿಸಿದ್ದರು.

ಹುಸೇನಿವಾಲಾ ಜಾಥಾ ಫಿರೋಜಾಪುರ, ಫರೀದ್ ಕೋಟ್, ಭಟಿಂಡಾ, ಸಂಗ್ರೂರ್, ಪಾಟಿಯಾಲಾ ಇತ್ಯಾದಿಗಳನ್ನು ಹಾದು ಹೋಗಲಿದೆ ಈ ಜಾಥಾ ಹರ್ಯಾಣವನ್ನು ಡಿಸೆಂಬರ್ 4 ರಂದು ಪ್ರವೇಶಿಸಿತು.

ಮುಂಬಯಿಯಿಂದ ದೆಹಲಿಯತ್ತ

ಮುಂಬಯಿ ಜಾಥಾ ನವೆಂಬರ್ 23 ರಂದು ದಾದರ್ ಟರ್ಮಿನಸ್‌ನಿಂದ ಹೊರಟಿತು. ಎಡ ಪಕ್ಷಗಳ ಕಾರ್ಯಕರ್ತರು ಸಮರ್ಥಕರು ಭಾವಪೂರಿತ ಬೀಳ್ಕೊಡುಗೆ ನೀಡಿದರು. ಕೆಲವು ದಿನಗಳ ಹಿಂದೆಯಷ್ಟೆ (ಅಂದರೆ ನವಂಬರ್ 16 ರಂದು) ಎಡಪಕ್ಷಗಳು ಮಹಾರಾಷ್ಟ್ರದ ಚಳಿಗಾಲದ ವಿಧಾನಸಭಾ ಅಧಿವೇಶನ ನಡೆಸುವ ನಾಗಪುರದಲ್ಲಿ 50,000 ಜನರ ರ್‍ಯಾಲಿ ನಡೆಸಿದವು. ಜಾಥಾದ ಬೇಡಿಕೆಗಳಿಗೆ ಒತ್ತಾಯಿಸುವುದೇ ಈ ರ್‍ಯಾಲಿಯಉದ್ದೇಶವಾಗಿತ್ತು. ಈ ಜಾಥಾದ ನಾಯಕತ್ವವನ್ನು ಕೆ.ಎಲ್.ಬಜಾಜ್ ಸಿ.ಪಿ.ಐ.(ಎಂ) ಜಿ.ಎ.ಬೆಟ್ನಿಸ್ ಸಿ. ಪಿ. ಐ ಇತ್ಯಾದಿ ಎಡ ನಾಯಕರು ವಹಿಸಿದ್ದರು.

ಜಾಥಾ ಥಾಣೆ, ಭಿವಂಡಿ, ಶಹಾಪುರ್, ಇಗತಾಪುರಿ, ನಾಸಿಕ್, ಮಾಲೆಗಾಂ, ಔರಂಗಾಬಾದ್, ಇವುಗಳನ್ನು ದಾಟಿ ಇಂದೋರ್ ಮೂಲಕ ಮಧ್ಯಪ್ರದೇಶಕ್ಕೆ ಪ್ರವೇಶಿಸಿತು.

ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶ ಮುಂತಾದೆಡೆ ಚಳುವಳಿಗಾರರ ಮೇಲೆ ಲಾಠೀಚಾರ್ಜ್, ಬಂಧನಗಳ ಹಾಗೂ ದೆಹಲಿ ತಲುಪದಂತೆ ಇತರ ಅಡ್ಡಿ-ಆತಂಕಗಳನ್ನು ಒಡ್ಡಿದ ವರದಿಗಳೂ ಬಂದಿವೆ.

ಈ ಆರು ಮುಖ್ಯ ಜಾಥಾಗಳಲ್ಲದೆ ಕರ್ನಾಟಕದ ನಾಲ್ಕು ಉಪ ಜಾಥಾಗಳಂತೆ, ಅಸ್ಸಾಂ,ಗುಜರಾತ್ ಹಾಗೂ ಒರಿಸ್ಸಾಗಳಲ್ಲಿನ ಉಪ ಜಾಥಾಗಳು ತಲುಪದಿದ್ದ ಜನರನ್ನು ಮುಟ್ಟಿ ಈ ಚಳುವಳಿಯ ಸಂದೇಶಗಳನ್ನು ಯಶ್ವಸಿಯಾಗಿ ಹರಡಿವೆ.

ಡಿ. ವೈ. ಎಫ್. ಐ. ನಿಂದ ಕ್ರೀಡಾ ಸ್ಪರ್ಧೆ

ಡಿ. ವೈ. ಎಫ್. ಐ. ಮಂಗಳೂರು ತಾಲ್ಲೋಕು ಸಮಿತಿ ಆಶ್ರಯದಲ್ಲಿ ಸಂಘಟನೆಯ ಸ್ಥಾಪನಾ ದಿನಾಚರಣೆ ಅಂಗವಾಗಿ ತಾಲ್ಲೋಕು ಮಟ್ಟದ ಕ್ರೀಡಾ ಸ್ಪರ್ಧೆಯನ್ನು ಮಂಗಳೂರಿನ ಕೊಟ್ಟಾರ ಮೈದಾನದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿತ್ತು. ಧ್ವಜಾ ರೋಹಣದೊಂದಿಗೆ ಆರಂಭಗೊಂಡ ಕಾರ್ಯಕ್ರಮ ಪುರುಷರ ಕಬಡ್ಡಿ, ವಾಲಿಬಾಲ್ 100 ಮೀಟರ್ ಓಟ,200 ಮೀಟರ್, ಶಾಟ್ ಪುಟ್, ಹೈಜಂಪ್ ಮತ್ತು ಲಾಂಗ್ ಜಂಪ್ ಮಹಿಳೆಯರಿಗಾಗಿ ವೇಗದ ನಡಿಗೆ ಶಾಟ್‌ಪುಟ್ ಮತ್ತು ಬಾಲ್ ಪಾಸಿಂಗ್ ಸ್ಪರ್ಧೆಗಳನ್ನೂ ಹಾಗೂ 12 ವರ್ಷದೊಳಗಿನ ಮಕ್ಕಳಿಗೆ 50 ಮೀ. ಓಟದ ಸ್ಪರ್ಧೆಯೂ ಜರುಗಿತು.

ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡರಾದ ಕಾ|| ಬಿ. ಎಂ. ಮಾಧವ ರವರು ವಹಿಸಿದ್ದರು. ಪ್ರಸಿದ್ಧ ವಕೀಲರಾದ ಕಾ|| ಸೂರ್ಯ ನಾರಾಯಣ ಭಟ್ ಅತಿಥಿಗಳಾಗಿದ್ದರು. ಬಹುಮಾನ ವಿತರಣೆಯನ್ನು ನಿತ್ಯಾನಂದ ಗ್ರಂಥಾಲಯದ ಶ್ರೀ ಎಂ. ವೆಂಕಟರಾವ್ ಮಾಡಿದರು.

ಕಾ|| ಸೂರ್ಯನಾರಾಯಣ ಭಟ್ ಮಾತನಾಡಿ ದೇಶದಲ್ಲಿ ಕ್ರೀಡಾ ಪಟುಗಳಿಗೆ ಸಿಗಬೇಕಾದ ಸರಿಯಾದ ಅವಕಾಶ, ಸೌಲತ್ತುಗಳನ್ನು ಪ್ರೋತ್ಸಾಹವನ್ನು ನೀಡದೆ ಕಡೆಗಣಿಸಿದ ಕಾರಣ ಎಲ್ಲಾ ಅಂತರರಾಷ್ಟ್ರೀಯ ಓಲಂಪಿಕ್ಸ ಮತ್ತಿತರ ಸ್ಪರ್ಧೆಗಳಲ್ಲಿ ಭಾರತ ಕೀಳು ಮಟ್ಟಕ್ಕೆ ಇಳಿಯಲು ಕಾರಣವಾಗಿದೆ ಎಂದು ಅಭಿಪ್ರಾಯ ಪಟ್ಟರು. ಸಮಾಜವಾದಿ ದೇಶಗಳಲ್ಲಿ ದೊರೆಯುತ್ತಿರುವ ಉತ್ಸಾಹದಾಯಕ ಪ್ರೋತ್ಸಾಹದಿಂದಲ್ಲೇ ಕ್ರೀಡೆಗಳಲ್ಲಿ ಮುನ್ನಡೆ ಸಾಧಿಸುತ್ತಿರುವುದನ್ನು ಕಾಣುತ್ತಿದ್ದೇವೆ ಎಂದು ಅವರು ಹೇಳಿದರು.

ಕಬಡ್ಡಿ ಪಂದ್ಯದಲ್ಲಿ ಕುತ್ತಾರು "ಎ" ಮತ್ತು "ಬಿ" ತಂಡಗಳು ಜಯಗಳಿಸಿದವು. ವಾಲಿಬಾಲ್‌ನಲ್ಲಿ ಪಕ್ಕಲಗ ತಂಡ ಪ್ರಥಮ ಕುತ್ತಾರು ತಂಡ ದ್ವಿತೀಯ ಸ್ಥಾನಗಳಿಸಿದವು.

ಕೊನೆಯಲ್ಲಿ ಸ್ವಾಗತ ಸಮಿತಿ ಕಾರ್ಯದರ್ಶಿ ಕಾ|| ಯು. ಕೃಷ್ಣ ವಂದಿಸಿದರು.

ಕೆ. ಜಿ. ಎಫ್. ನಲ್ಲಿ ಹುತಾತ್ಮರ ದಿನಾಚರಣೆ

1946ರಲ್ಲಿ ಆಗಿನ ಎ.ಐ.ಟಿ.ಯು. ಸಿ.ಯ ಅಧ್ಯಕ್ಷರಾಗಿದ್ದ ಕಾ. ಕೆ.ಎಸ್. ವಾಸನ್ ರವರ ಮೇಲೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತದ ಬಾಲಬಡುಕರು ಹಲ್ಲೆ ನಡೆಸಿದನ್ನು ಪ್ರತಿಭಟಿಸಿ ಅಂದು ಕಾರ್ಮಿಕರು ನಡೆಸಿದ ಬೃಹತ್ ಪ್ರತಿಭಟನೆಯಲ್ಲಿ ಬ್ರಿಟಿಷ್ ಪೊಲೀಸ್‌ರ ಗುಂಡಿಗೆ 6 ಮಂದಿ ಸಂಗಾತಿಗಳು ಬಲಿಯಾದರು.

ಆ ಹುತಾತ್ಮರ ನೆನಪಿಗಾಗಿ, ಅವರು ಬಿಟ್ಟುಹೋದ ಧ್ಯೇಯವನ್ನು ಪೂರ್ಣ ಗೊಳಿಸುವ ಪ್ರತಿಜ್ಞೆಯನ್ನು ಪ್ರತಿವರ್ಷ ನವಂಬರ್ 4ರಂದು ಕೆ.ಜಿ. ಎಫ್.ನ ಸಂಗಾತಿಗಳು ತೆಗೆದುಕೊಳ್ಳುತ್ತಾರೆ. ಕಾ.ಟಿ.ಎಸ್. ಮಣಿ ಎಂ. ಎಲ್.ಎ, ಕಾ. ಎಂ. ಜಯರಾಂ ಸಿ.ಐ ಟಿ.ಯು. ಕಾರ್ಯದರ್ಶಿ ಕಾ. ಸವರಿದಾಸ್‌ರವರ ನೇತೃತ್ವದಲ್ಲಿ 300 ಮಂದಿ ಸಂಗಾತಿಗಳು 4ರಂದು ಮೈನ್ಸ್ ಯೂನಿಯನ್ ಕಛೇರಿಯಿಂದ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲು ಮೌನ ಮೆರವಣಿಗೆ ನಡೆಸಿದರು. ನಂತರದ ಸಭೆಯನ್ನುದ್ದೇಶಿಸಿ ಮುಖಂಡರು ಮಾತನಾಡಿದರು ಎಂದು ಕಾ. ಅಚುತ ವರದಿ ಮಾಡಿದ್ದಾರೆ.

ಕನ್ನಡ ರಾಜ್ಯೋತ್ಸವ, ಸಾಹಿತ್ಯ ಸಮ್ಮೇಳನಗಳಲ್ಲಿ

–ಜಿ. ಎನ್. ನಾಗರಾಜ್

ಕನ್ನಡ ರಾಜ್ಯೋತ್ಸವಗಳು ತಿಂಗಳೆಲ್ಲಾ ಸಾಗಿವೆ. ಅದರ ಆರಂಭದಲ್ಲಿಯೇ ಕನ್ನಡ ಸಾಹಿತ್ಯ ಸಮ್ಮೇಳನ ಈ ಎಲ್ಲೆಡೆ ಚರ್ಚೆಯಾದದ್ದೇನು ? ಕನ್ನಡ ಜನರ ಮನಸ್ಸಿನಲ್ಲಿ ಬಿತ್ತಲಾಗುತ್ತಿರುವ ಭಾವನೆಗಳಲ್ಲಿ ಜನಪರ ಯಾವುದು, ಜನ ವಿರೋಧಿ ಯಾವುದು ? ಈ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಕರ್ತವ್ಯವೇನು?

ಇಡೀ ನವಂಬರ್ ತಿಂಗಳೆಲ್ಲಾ ರಾಜ್ಯೋತ್ಸವಗಳು ನಡೆದು ಜನರ ಮನಸ್ಸಿನ ಮೇಲೆ ವಿವಿಧ ರೀತಿಯ ಪರಿಣಾಮಗಳನ್ನು ಮೂಡಿಸಿದೆ. ರಾಜ್ಯೋತ್ಸವವೆಂದರೆ ಎಲ್ಲರಿಗೂ ಹರುಷವೇ. "ನಾಕೋಡೆ" ಎಂದು ಪಟ್ಟು ಹಿಡಿದಿದ್ದ. ಭಾರತದ ಆಳುವ ವರ್ಗಗಳಿಂದ ವಿವಿಧ ಭಾಷೆಗಳನ್ನು ಮಾತನಾಡುವ ದೇಶೀ ಜನಾಂಗಗಳು ಪಟ್ಟು ಬಿಡದೆ ಹೋರಾಡಿ ಪಡೆದು ಗಳಿಸಿದ ಫಲ ಅದು. ವಿಶಾಲಾಂಧ್ರ, ಐಕ್ಯ ಕೇರಳ, ಸಂಯುಕ್ತ ಮಹಾರಾಷ್ಟ್ರ, ಸಂಯುಕ್ತ ಗುಜರಾತ್ ಎಂಬ ಉದ್ಘೋಷಗಳ ಜೊತೆಗೆ ಕರ್ನಾಟಕ ಸರಕಾರದ ಘೋಷವೂ ಸೇರಿತ್ತು. ದೇಶದ ಎಲ್ಲಾ ಭಾಷೆಯ ಜನರೂ ಒಟ್ಟಾಗಿ ಬೆಸೆದುಕೊಂಡು ಜವಹರಲಾಲ್ ನೆಹರೂರವರ ಕೇಂದ್ರ ಸರಕಾರ ವಿರುದ್ಧ ಕಾಳಗದ ಕಹಳೆಮೊಳಗಿಸಿದುವು.

ಒಂದೇ ಭಾಷೆ ಮಾತನಾಡುವವರ, ಒಂದೇ ಸಂಸ್ಕೃತಿಯ ಜನರು ತಮ್ಮ ಬೆಳವಣಿಗೆಯನ್ನು, ತಮ್ಮ ಆಡಳಿತವನ್ನು ತಾವೇ ಮಾಡುವಂತಾಗಲಿ ಎಂದು ಈ ಎಲ್ಲಾ ಜನರ, ವಿವಿಧ ಭಾಷೆ ಸಂಸ್ಕೃತಿಗಳ ಜನರ ಒಟ್ಟು ಅಭಿಪ್ರಾಯವಾಗಿತ್ತು. ಇಂತಹ ಐಕ್ಯತೆಯಿಂದ ಆರಂಭವಾದ ರಾಜ್ಯೋದಯಗಳ ಪ್ರಕ್ರಿಯೆಯಲ್ಲಿ ಇಂದು ಯಾವ ಹಾದಿಯನ್ನು ಹಿಡಿದಿವೆ ಎಂಬುದು ಪರಸ್ಪರ ವಿಚಾರಗಳ, ಭಾವನೆಗಳ ಐಕ್ಯತೆ ಇಂದೂ ಉಳಿದಿದೆಯೆ ? ರಾಜ್ಯಾದ್ಯಂತ ಸರ್ಕಾರದ ಉಮ್ಮೇದಿನಿಂದಲೇ ನಡೆಯುತ್ತಾ ಬಂದಿರುವ ರಾಜ್ಯೋತ್ಸವಗಳಲ್ಲಿ ಹಾಗೂ ಬೆಂಗಳೂರು, ಬೆಳಗಾಂ ಮೊದಲಾದ ನಗರಗಳಲ್ಲಿ ಅನೇಕ ತಂಡಗಳು ತಿಂಗಳುಗಟ್ಟಲೆ ನಡೆಸುತ್ತಾ ಬಂದ ಉತ್ಸವಗಳಲ್ಲಿ ಈ ವಿಚಾರಗಳು ಚರ್ಚೆಗೊಳಗಾದುವೇ ? ಕನ್ನಡಿಗರ ಜೀವಂತ ಬದುಕಿನ ಪ್ರಶ್ನೆ ಭಾರತದ ಎಲ್ಲಾ ಜನರ ಪ್ರಶ್ನೆಗಳಾದ ರಾಜ್ಯಗಳ ಸರ್ವತೋಮುಖ ಅಭಿವೃದ್ಧಿ, ಭಾಷೆಗಳ ಬೆಳವಣಿಗೆ, ಈ ಅಭಿವೃದ್ಧಿಗೆ ಇರುವ ಅಡ್ಡಿ ಚರ್ಚೆಯಾದುವೇ ? ಇದು ಕೂಲಂಕಶವಾಗಿ ವಿಮರ್ಶಿಸಬೇಕಾದ ವಿಚಾರ.

ಈ ವರ್ಷದ ವಿಶೇಷವಾಗಿ, ರಾಜ್ಯೋತ್ಸವಗಳಲ್ಲಿ ಆಗುವ, ಆಗಬೇಕಾದ ಚರ್ಚೆಗಳಿಗೆ ಮುನ್ನುಡಿಯೆಂಬಂತೆ.

ಗುಲ್ಬರ್ಗಾದಲ್ಲಿ ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಚರ್ಚೆಗಳು, ಭಾಷಣಗಳು.

ಇದರಲ್ಲಿ ಪ್ರಮುಖವಾಗಿ ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಹಾಗೂ ಅದೇ ವೇದಿಕೆಯಲ್ಲಿ ಏಕೀಕೃತ ವಿಶಾಲ ಮೈಸೂರಿನ ಪ್ರಥಮ ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಮಾತುಗಳು.

ಕನ್ನಡ ರಾಜ್ಯೋತ್ಸವದ ಉತ್ಸಾಹದಲ್ಲಿ, ಕನ್ನಡ ಸಾಮಾಜಿಕ ಮನಸ್ಸಿನ ಬೆಳವಣಿಗೆಯ ಇಂದಿನ ಸ್ಥಿತಿಯಲ್ಲಿ, ಕರ್ನಾಟಕದ ಕನ್ನಡದ ಅಭಿವೃದ್ಧಿಯಾಗಬೇಕು ಎಂಬ ತೀವ್ರ ಪ್ರಜಾಸತ್ತಾತ್ಮಕ ಕಾಳಜಿಯ ಜೊತೆ ಜೊತೆಯಲ್ಲಿಯೇ ಈ ಹಿಂದುಳಿದಿರುವಿಕೆಗೆ ಕಾರಣಗಳನ್ನು ಕರ್ನಾಟಕದಲ್ಲಿ ನೆಲೆಸಿರುವ ಕನ್ನಡೇತರ ಜನರ 'ವಲಸೆ' ಪ್ರಶ್ನೆಯಾಗಿಯೋ ಅಥವಾ ಬಗೆಹರಿಯದ ಗಡಿ ಪ್ರಶ್ನೆಯಾಗಿಯೂ, ಭಾಷಾ ಅಲ್ಪ ಸಂಖ್ಯಾತರ ಮೇಲೆ ಕನ್ನಡವನ್ನು ಹೇರುವ ಪ್ರಶ್ನೆಯಾಗಿ ಜನ ವಿರೋಧಿ ಧೋರಣೆಗಳು, ಭಾರತದ ಜನರ ಐಕ್ಯತೆಯನ್ನು ಒಡೆಯುವ ಮಾತುಗಳೂ ಕೇಳಿ ಬರುತ್ತಿವೆ.

ಕನ್ನಡಿಗರಅಭಿವೃದ್ಧಿಗೆ ಮಾರಕವಾಗಿರುವ ಮೂಲಭೂತಅಂಶಗಳನ್ನು ಗುರುತಿಸಿದರೆ, ಅವೇ ಅಂಶಗಳೇ ತಮಿಳರ, ಮಲೆಯಾಳಿಗಳ, ತೆಲುಗರ, ಮರಾಠಿಗಳ ಎಲ್ಲಾ ಭಾಷೆಗಳ ಜನ ಹಿಂದುಳಿದಿರುವಿಕೆಗೆ ಕಾರಣವಾಗಿದೆ ಎಂಬುದನ್ನು ಗುರುತಿಸಬಹುದು. ಇದೇ ಅಂಶಗಳೇ ಅಸ್ಸಾಮೀಜನರ, ಅಕಾಲಿಗಳ ಚಳುವಳಿಯು ಹಿಂದೆ ಇರುವುದು ಎನ್ನುವುದನ್ನು ಗುರುತಿಸಬಹುದು. ಸಮಸ್ಯೆಯ ಆಳದಲ್ಲಿವನಿದೆ ಎಂಬುದನ್ನು ಗುರುತಿಸದೆ ಮೇಲು ಮೇಲಿನ ಕೊಂಬೆರೆಂಬೆಗಳನ್ನಷ್ಟೇ ಕಂಡಾಗ ಅದು ತಮಿಳರ ಮರಾಠಿಗಳ ಮೇಲಿನ ದ್ವೇಷವಾಗಿ ಪರಿಣಮಿಸುತ್ತದೆ. ಭಾರತವನ್ನು ಒಡೆಯಬೇಕೆಂದು ಹೊಂಚುಹಾಕುತ್ತಿರುವ ಅಮೇರಿಕಾದಂತಹ ಸಾಮ್ರಾಜ್ಯಶಾಹಿ ಶಕ್ತಿಗಳ ಕುಮ್ಮಕ್ಕು ದೊರೆತರೆ ಅಸ್ಸಾಂ ಪಂಜಾಬ್‌ಗಳ ಛಿದ್ರಕಾರಿ ಚಳುವಳಿಯಾಗಿ, ಫಿರಂಗಿಗಳ ಕೈಯ ಸಾಧನವಾಗಿ ಪರಿಣಮಿಸಬಹುದು.

ಯಾವ ಬಡತನ ತಮಿಳರನ್ನು ದ್ವೇಷಿಸುವಂತೆ ಮಾಡುತ್ತದೆಯೋ ಅದೇ ಬಡತನವೇ ತಮಿಳರನ್ನು ಇತರರನ್ನು ಬೆಂಗಳೂರಿನತ್ತ ಇತರ ಪ್ರದೇಶಗಳತ್ತ ಎಳೆಯುತ್ತದೆ ಹಾಗೂ ಉ. ಕರ್ನಾಟಕದ ಕನ್ನಡಿಗರನ್ನು ಗೋವಾ ಮಹಾರಾಷ್ಟ್ರಗಳತ್ತ ದೂಡುತ್ತದೆ, ಎಂಬುದನ್ನು ಅಲ್ಲಿಶಿವಸೇನೆ, ಗೋಮಾಂತಕವಾದಿಗಳಂತಹ ಸಮಾಜದ್ರೋಹಿ ಶಕ್ತಿಗಳ ಬೆಳವಿಗೆ ಕಾರಣವಾಗುತ್ತದೆ ಎಂಬುದನ್ನು ಮರೆಯುತ್ತಾರೆ.("ವಲಸೆ" ಬಗ್ಗೆ ವಿವರ ವಿಶ್ಲೇಷಣೆಗಾಗಿ ನೋಡಿ ಐಕ್ಯರಂಗ–87)

(5ನೇ ಪುಟ ನೋಡಿ)

ಎರಡು ದೃಷ್ಟಿಕೋನಗಳ ಸಂಘರ್ಷ

ಬಂಡವಾಳಶಾಹಿರಾಷ್ಟ್ರಾಂಧತೆ – ಕಾರ್ಮಿಕವರ್ಗದ ಅಂತರ ರಾಷ್ಟ್ರೀಯತೆ !

ಕನ್ನಡ ಭಾಷಿಕರ ದೇಸೀ ಜನಾಂಗಗಳ ಪ್ರಶ್ನೆಯಲ್ಲಿ ಮತ್ತೆ ಮತ್ತೆ ರಾಷ್ಟ್ರಾಂಧತೆಯು, ಪರ ಭಾಷಿಕರ ಬಗ್ಗೆ ದ್ವೇಷದ ವಲಸೆ ತಡೆಗಟ್ಟುವ ಕ್ರಮಗಳು ದ್ವಿಪೌರತ್ವ, ಬೇರೆ ರಾಜ್ಯದವರಿಗೆ "ವರ್ಕ್ ಪರ್ಮಿಟ್" ಇದ್ದರೆ ಮಾತ್ರ ಕರ್ನಾಟಕದಲ್ಲಿ ಪ್ರವೇಶ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಬಗ್ಗೆ "ಐಕ್ಯರಂಗ" ಹಿಂದೆಯೇ ವಲಸೆಯ ಚಾರಿತ್ರಿಕ ಹಿನ್ನಲೆಯನ್ನು ವಿವರಿಸಿದೆ. ಈ ಇಡೀ ಪ್ರಶ್ನೆಯ ಬಗ್ಗೆ ಬರೆಯುತ್ತಾ ಕಾಂ.ಲೆನಿನ್‌ರವರು ಇದು ಎರಡು ವರ್ಗಗಳ–ವರ್ಗ ದೃಷ್ಟಿಕೋನಗಳ ಸಂಘರ್ಷ ಎನ್ನುತ್ತಾರೆ.

ಪ್ರತಿಯೊಂದು ದೇಶದ ಭಾಷಾ ಜನಾಂಗದ ಬಂಡವಾಳಶಾಹಿ ವರ್ಗವೂ ಕೂಡ ಕಾರ್ಮಿಕ ವರ್ಗವನ್ನು, ಇಡೀ ದುಡಿಯುವ ಜನತೆಯನ್ನು ತಮ್ಮ ಆರ್ಥಿಕ, ರಾಜಕೀಯ ಮುಷ್ಠಿಯಲ್ಲಿರಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತಾರೆ. ಹೀಗೆ ಆರ್ಥಿಕ ರಾಜಕೀಯ ಹಿಡಿತದಲ್ಲಿರಿಸಿಕೊಳ್ಳಬೇಕಾದರೆ ಕಾರ್ಮಿಕ ವರ್ಗದ, ದುಡಿಯುವ ಜನರ ಮೆದುಳುಗಳನ್ನು ತಮ್ಮ ಸೈದ್ಧಾಂತಿಕ ಹಿಡಿತದಲ್ಲಿರಿಸಿಕೊಳ್ಳುವುದು ಅಗತ್ಯವಾಗುತ್ತಾ ಹೋಗುತ್ತವೆ. ತಮ್ಮ ಜೋಬುಗಳಭರ್ತಿಯಾಗಿ ಇಡೀ ಜನತೆಯನ್ನು ತಮ್ಮ ಅಡಿಯಾಳಾಗಿ ದುಡಿಸಿಕೊಳ್ಳುವ ಆಳುವ ವರ್ಗಗಳ ಬಯಕೆ ಜನ ಸಾಮಾನ್ಯರಿಗೆ ಅರಿವಾದಂತೆಲ್ಲಾ, ಅವರಿಗೆ ಪ್ರಜ್ಞೆ ಮೂಡಿದಂತೆಲ್ಲಾ ಆಳುವ ವರ್ಗಗಳು ಹೊಸ ಸಿದ್ಧಾಂತಗಳನ್ನು ಹೊಸೆಯಲು ಕಾರ್ಮಿಕರನ್ನು ನಮ್ಮ ಮುಷ್ಠಿಯಲ್ಲಿ ಮತ್ತಷ್ಟು ತೀವ್ರ ಪ್ರಯತ್ನ ಮಾಡುತ್ತಿರುತ್ತಾರೆ. ಜಾತಿ,ಮತ, ಧರ್ಮಗಳ ಭೇದಭಾವ ಬಿತ್ತುವುದು ಒಂದು ಪ್ರಯತ್ನವಾದರೆ ಭಾಷೆಗಳ, ಗಡಿಗಳ ನದಿನೀರಿನ ಹಂಚಿಕೆ ವಿವಾದಗಳ ಪ್ರಶ್ನೆಯನ್ನು ಸರ್ವಸಮ್ಮತವಾಗಿ ಬಗೆಹರಿಸದೇ ಹಾಗೇ ಬಿಡುವುದು ಜೀವಂತವಾಗಿರಿಸುವುದು ಆಗಾಗ್ಗೆ ಎಣ್ಣೆ ಎರೆದು ಕಿಚ್ಚೆಬ್ಬಿಸುವುದು ಅಂತಹ ಒಂದು ಪ್ರಯತ್ನ. ನಮ್ಮ ಭಾಷೆ, ನಮ್ಮ ಸಂಸ್ಕೃತಿ ಎಂಬ ಭಾವನೆಗಳನ್ನು ಬಡಿದೆಬ್ಬಿಸಿತಮ್ಮ ಕೈಜಾರಿಹೋಗುತ್ತಿರುವ ದುಡಿಯುವ ಜನತೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳ ಬಯಸುವುದು ಈ ಪ್ರಶ್ನೆಯ ಒಂದುಮುಖ.

ಮತ್ತೊಂದು ಮುಖವೆಂದರೆ ರಾಜ್ಯದಗಡಿ, ನದಿಯನೀರಿನ ಪ್ರಶ್ನೆ, ಭಾಷೆಯ ಪ್ರಶ್ನೆ ಇವೆಲ್ಲವೂ ಖಾಸಗೀ ಲಾಭದ, ಖಾಸಗೀ ಆಸ್ತಿಯ, ಶೋಷಣೆಯ ಬಯಕೆಯಿಂದ ಭಿನ್ನವಾಗಿಲ್ಲ. ಬಂಡವಾಳಶಾಹಿಗಳ ಒಂದು ಗುಂಪಿನ ವಿರುದ್ಧ ಇನ್ನೊಂದುಕತ್ತಿಮಸೆಯುತ್ತಾ ತಮ್ಮ ಲಾಭಹೆಚ್ಚಬೇಕೆಂದು ಬಯಸುವುದೇ ಗಡಿಯ ವಿವಾದಕ್ಕೆ, ನದಿನೀರಿನ ವಿವಾದಕ್ಕೆ ಎಡೆಕೊಡುತ್ತದೆ.

ಗಡಿಯೆಂದರೇನು? ಗಡಿಯ ಈ ಕಡೆ ಅಥವಾ ಆ ಕಡೆ ಇರುವ ಭೂಮಾಲೀಕರಿಗೆ ಸೇರಿದ ಭೂಮಿ, ಬಂಡವಾಳಶಾಹಿಗಳಿಗೆ ಸೇರಿದ ಕಚ್ಚಾವಸ್ತುಗಳು, ಕಾರಖಾನೆಗಳು ಹಾಗೂ ಇದರಲ್ಲಿ ತಯಾರಾಗುವ ವಸ್ತುಗಳನ್ನು ಕೊಳ್ಳುವ ಜನತೆ ಹಾಗೆಯೇ ನದೀ ನೀರು ಕೂಡಾ ಇಂತಹವೇ ಹಿತಾಸಕ್ತಿಗಳಿಗೆ ಬಲಿಯಾಗುತ್ತದೆ. ಆದುದರಿಂದ ಸಾಮಾನ್ಯ ಜನತೆಯ, ಹಿತ್ತಾಸಕ್ತಿಯ ಪ್ರಶ್ನೆಯೂ ಇದರಲ್ಲಿ ಅಡಗಿದೆಎಂಬುದನ್ನು ಗಮನಿಸದೆ ತಮ್ಮ ಲಾಭಕ್ಕಾಗಿಬಡಿದಾಡುತ್ತಾ ಈ ಬಡಿದಾಟದಲ್ಲಿ ತಮ್ಮ ಭಾಷೆಯ ದುಡಿಯುವ ಜನತೆಯನ್ನು ತಮ್ಮ ಹಿಂದಿಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ. ಆದುದರಿಂದ ಬಂಡವಾಳಶಾಹಿ ಭೂಮಾಲಕ ಆಡಳಿತದಲ್ಲಿ ಗಡಿಸಮಸ್ಯೆ ಮುಂತಾದ ಸಮಸ್ಯೆಗಳು ಅಂತಿಮವಾಗಿ ಬಗೆಹರಿಯಲ್ಪಡುವುದೇ ಇಲ್ಲ ಏಕೆಂದರೆಪ್ರಜಾಸತ್ತಾತ್ಮಕವಾದಅಲ್ಲಿವಾಸಿಸುವಜನತೆಯಹಿತವನ್ನೇ ಮಾತ್ರ ಆಧಾರವಾಗಿಟ್ಟುಕೊಂಡರೆ ತಾನೆ?

ಲೆನಿನ್‌ರವರು ದೇಶ ಭಾಷಾ ಜನಾಂಗಗಳ ಪ್ರಶ್ನೆ ಕುರಿತಂತೆ ಬಂಡವಾಳಶಾಹಿ ಎರಡು ಐತಿಹಾಸಿಕ, ಪ್ರಗತಿಪರ ಬದಲಾವಣೆಯನ್ನು ತರುತ್ತದೆ ಎನ್ನುತ್ತಾರೆ. ಒಂದನೆಯದಾಗಿ ರಾಷ್ಟ್ರೀಯ ಚಳುವಳಿಗಳು, ದೇಶ ಭಾಷಾ ಚಳುವಳಿಗಳನ್ನು ಬೆಳೆಸುವುದು, ಎಲ್ಲಾ ರೀತಿಯ ರಾಷ್ಟ್ರೀಯ ತುಳಿತದ ವಿರುದ್ಧ ಹೋರಾಡುವುದು ಎಲ್ಲಾ ಭಾಷೆಗಳ, ಆ ಭಾಷೆ ಮಾತನಾಡುವ ಜನರ ಸಮಾನತೆಗಾಗಿ ಹೋರಾಡುವುದು.

ಎರಡನೆಯದಾಗಿ ಬೇರೆ ಬೇರೆ ಭಾಷಿಕ, ರಾಷ್ಟ್ರೀಯ ಜನಾಂಗಗಳ ನಡುವೆ ಎಲ್ಲಾ ರೀತಿಯ ಸಂಪರ್ಕವನ್ನು ರೂಡಿಸುವುದು ಭಾಷೆ, ಹಾಗೂ ರಾಷ್ಟ್ರದ ಗಡಿಗಳನ್ನು ಮೀರಿದ ಆರ್ಥಿಕ ಜೀವನದ, ರಾಜಕೀಯದ, ವಿಜ್ಞಾನದ ಐಕ್ಯತೆಯನ್ನುತರುವುದುಮತ್ತೊಂದು.

ಒಬ್ಬ ಮಾರ್ಕ್ಸ್‌ವಾದಿ ತನ್ನ ಕಾರ್ಯಕ್ರಮಕ್ಕಾಗಿ ಈ ಎರಡು ಪ್ರವೃತ್ತಿಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ದೇಶಗಳ, ಭಾಷೆಗಳ ಸಮಾನತೆಗಾಗಿ, ಯಾವುದೇ ಒಂದುಭಾಷೆಯ ಒಂದು ಜನಾಂಗದ ಮೇಲುಗೈಯನ್ನು ವಿರೋಧಿಸುವುದಕ್ಕಾಗಿ(ಉದಾ: ಹಿಂದಿ, ಇಂಗ್ಲಿಷ್‌ಗಳ ಮೇಲ್ಮೆಯನ್ನು] ಹೋರಾಡಬೇಕು.ಆದರೆ ಅದೇ ಸಮಯದಲ್ಲಿ ತನ್ನ ಲಾಭದಆಸೆಗಾಗಿ ಯಾವುದೇ ಬಂಡವಾಳಶಾಹಿ, ತನ್ನ ಭಾಷೆಯ, ದೇಶದ ಪ್ರತ್ಯೇಕತೆಗಾಗಿ ಬಿತ್ತುವ ಭಾವನೆಗಳಿಗೆ ಬಲಿಯಾಗಬಾರದು. ಇಂತಹ ಸೈದ್ಧಾಂತಿಕ ಕಲಬೆರಕೆಯ ವಿರುದ್ಧ ನಿರಂತರವಾಗಿ ಹೋರಾಡಬೇಕು ಎನ್ನುತ್ತಾರೆ ಲೆನಿನ್.

ಪ್ರತಿ ಸಂಸ್ಕೃತಿಯಲ್ಲೂ ನಿಜವಾಗಿ ನೋಡುವುದಾದರೆ ಎರಡು ಸಂಸ್ಕೃತಿಗಳಿರುತ್ತವೆ. ಒಂದು ಆಳುವ ವರ್ಗದ ಸಂಸ್ಕೃತಿ ಮತ್ತೊಂದು ಸಮಾಜವಾದಿ ಸಂಸ್ಕೃತಿಯ ಬೀಜವಾದ ದುಡಿಯುವ ವರ್ಗದ ಸಂಸ್ಕೃತಿ. ಆದುದರಿಂದ ಕನ್ನಡಸಂಸ್ಕೃತಿ ಎಂದರೆ ಯಾವುದು? ಕನ್ನಡಸಂಸ್ಕೃತಿಯಹಿರಿಮೆಯಾವುದು? ಎಂಬುದನ್ನು ದುಡಿಯುವ ಜನಪ್ರಶ್ನಿಸಿಕೊಳ್ಳಬೇಕಾಗುತ್ತದೆ. ದುಡಿಯುವಜನ ಮತ್ತೊಂದು ಸಂಸ್ಕೃತಿಯ ಮುಂದುವರಿದ ದುಡಿಯುವ ಜನ ವಿಭಾಗದ ಉಚ್ಚ ಮಟ್ಟದ ಸಂಸ್ಕೃತಿಯಿಂದ ಕಲಿಯಲು, ಪ್ರಯತ್ನಿಸಬೇಕೇ ಹೊರತು ತನ್ನ ಸಂಸ್ಕೃತಿಯ ಉಚ್ಚತೆಯನ್ನು ಪ್ರತ್ಯೇಕತೆಯನ್ನು ಘೋಷಿಸುತ್ತಾ ಹೋಗುವುದಿಲ್ಲ.

ಆದುದರಿಂದ ಪ್ರತಿ ಭಾಷೆಯಉಚ್ಚ ಮಟ್ಟದ ಬೆಳವಣಿಗೆಗಾಗಿ, ಸಮಾನತೆಗಾಗಿ ಬೇರೆ ಭಾಷೆಯವಿಶೇಷ ಸವಲತ್ತುಗಳ ವಿರುದ್ಧ ಹೋರಾಡುತ್ತಲೇಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಗೆ ಅಡ್ಡಿ ಬರುವ ಯಾವುದೇ ಅಂಧ ಭಾವನೆಗೆ ಬಲಿಯಾಗುವುದು ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ.

ಮಹಾಜನ್ ಆಯೋಗದ ಶಿಫಾರಸುಗಳನ್ನು ಕುರಿತು

–1967ರ ಪಾಲಿಟ್‌ಬ್ಯೂರೋ ನಿರ್ಣಯ

ಗಡಿ ಸಮಸ್ಯೆ ಮತ್ತೆ ಮತ್ತೆ ಕರ್ನಾಟಕ ಮಹಾರಾಷ್ಟ್ರಗಳ ಜನತೆಯನ್ನು ದುಡಿಯುವ ಜನತೆಯನ್ನು ವಿಭಜಿಸಲು, ಒಬ್ಬರ ವಿರುದ್ಧ ಒಬ್ಬರನ್ನು ಪರಸ್ಪರ ಎತ್ತಿ ಕಟ್ಟಲು ಉಪಯೋಗವಾಗುತ್ತಿದೆ. ಕರ್ನಾಟಕ ಸರಕಾರ ನೇಮಿಸಿದ ಕನ್ನಡ ಕಾವಲು ಸಮಿತಿಯ ಕೆಲಸಗಳಲ್ಲಿ ಒಂದು ಗಡಿ ಕಾವಲು ಕೂಡಾ ಆಗಿದೆ.

ಗಡಿಗಳ ರಕ್ಷಣೆಯ ಹೆಸರಿನಲ್ಲಿ ಪಾಟೀಲ ಪುಟ್ಟಪ್ಪನವರು ವಾಟಾಳ್ ನಾಗಾರಾಜ್ ಹಾಕುವ ಗುಟರುಗಳು ಹಾಗೆಯೇ ಮಹಾರಾಷ್ಟ್ರದ ಸೀಮಾ ಸಮಿತಿ, ಶರದ್‌ಪವಾರ್‌ರವರ ಪ್ರಯತ್ನಗಳೂ ಕೂಡಾ ಅಷ್ಟೇ ಖಂಡನಾರ್ಹವಾಗಿವೆ.

ಇತ್ತೀಚೆಗೆ ಕನ್ನಡ ಸಾಹಿತ್ಯಸಮ್ಮೇಳನಗಳಲ್ಲಿ ಹಾಗೂ ರಾಜ್ಯೋತ್ಸವ ಭಾಷಣಗಳಲ್ಲಿ ಮಹಾಜನ್ ವರದಿ ಜಾರಿಯಾಗಲೇಬೇಕು ಎಂಬ ಕೂಗು ಎಷ್ಟು ನೈಜವಾದುದು ? ಮಹಾಜನ್ ವರದಿಯ ಬಗ್ಗೆ ಹಿಂದೆ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ 1967ರಲ್ಲಿ ಅಂಗೀಕರಿಸಿರುವ ನಿರ್ಣಯವನ್ನು ನೋಡೋಣ.

ಕೇವಲ 3 ವರ್ಷಗಳ ಮೊದಲು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಡಾ||ಹಾ.ಮಾ. ನಾಯಕರು ಗಡಿಸಮಸ್ಯೆಯನ್ನು ಕೆದಕುವುದು ಬೇಡ. ಈಗ ಹೇಗಿದೆಯೋ ಹಾಗೆ ಇರಲಿ ಎಂದು ಹೇಳಿದರು. ಆದರೆ ಇಂದು ಹಾಮಾ ನಾಯಕರಿಂದ ಅಧ್ಯಕ್ಷತನ ವಹಿಸಿಕೊಂಡ ಸಿದ್ಧಯ್ಯ ಪುರಾಣಿಕರು ಈ ನಿಲುವನ್ನು ಕೈ ಬಿಟ್ಟು ಮಹಾಜನ್ ವರದಿ ಜಾರಿಯಾಗಲೇಬೇಕು ಎಂಬ ನಿಲುವು ತಳೆದಿದ್ದಾರೆ. ಇದೇ ಸಮಯದಲ್ಲಿ ದೇವರಾಜ ಅರಸು ರವರ ಸರ್ಕಾರ ಈಗಿದ್ದ ಸ್ಥಿತಿಯೇ ಮುಂದುವರೆಯಲಿ ಎಂದು ತೀರ್ಮಾನ ಮಾಡಿದ್ದನ್ನು ಈಗಿನ ಹೆಗ್ಗಡೆ ಸರಕಾರ ಮತ್ತೆ ಮಹಾಜನ ವರದಿ ಜಾರಿಯಾಗಲೀ ಎಂದು ಹೇಳುತ್ತಿರುವುದನ್ನೂ ಗಮನಿಸಬೇಕು. ಕರ್ನಾಟಕ ಮಹಾರಾಷ್ಟ್ರಗಳ ಕಾರ್ಮಿಕ ವರ್ಗ ದುಡಿಯುವ ಜನತೆ ಈ ಬಗ್ಗೆ ಎಚ್ಚರದಿಂದಿರಬೇಕು.

ಮೈಸೂರು ಮತ್ತು ಮಹಾರಾಷ್ಟ್ರ ಹಾಗೂ ಮೈಸೂರು ಕೇರಳದ ನಡುವಿನ ಗಡಿ ವಿವಾದಗಳ ಕುರಿತಾದ ಮಹಾಜನ್ ಆಯೋಗದ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ಅದರ ಶಿಫಾರಸುಗಳನ್ನು ಪಾಲಿಟ್‌ಬ್ಯೂರೋ ತಿರಸ್ಕರಿಸುತ್ತದೆ. ಆಯೋಗದ ಶಿಫಾರಸುಗಳು ತತ್ವ ಬದ್ಧವಾಗಿಲ್ಲ ಹಾಗೂ ದೋಷಪೂರಿತವಾಗಿವೆ. ಭಾರತ ಒಕ್ಕೂಟದ ಭಾಷಾವಾರು ರಾಜ್ಯ ವ್ಯವಸ್ಥೆಯ ಪ್ರಶ್ನೆಗಳನ್ನು ಪರಿಹರಿಸಲು ಅವು ನೆರವಾಗುವುದಿಲ್ಲ, ಬದಲಿಗೆ, ಕಲಹಗಳನ್ನು ಇನ್ನಷ್ಟು ತೀವ್ರಗೊಳಿಸಿ ದೇಶದ ಐಕ್ಯತೆಯನ್ನು ಛಿದ್ರಗೊಳಿಸಬಹುದಷ್ಟೆ.

ಭಾಷಾವಾರು ರಾಜ್ಯಗಳ ಗಡಿಗಳನ್ನು ಪುನಃ ನಿರೂಪಿಸುವಾಗ ಹಳ್ಳಿಯನ್ನು ಘಟಕವಾಗಿ ಪರಿಗಣಿಸಬೇಕು ಹಾಗೂ ಭೌಗೋಳಿಕ ನಿಕಟತೆ ಇರಬೇಕು ಎಂದು ನಮ್ಮ ಪಕ್ಷದ ಕಾರ್ಯಕ್ರಮ ಹೇಳಿದೆ. ಯಾವುದೇ ಹಳ್ಳಿಯಲ್ಲಿ ಒಂದು ನಿರ್ದಿಷ್ಟ ಭಾಷೆಯ ಜನ ಬಹು ಸಂಖ್ಯೆಯಲ್ಲಿದ್ದರೆ ಆ ಹಳ್ಳಿಯನ್ನು ಪಕ್ಷದ ಸಂಬಂಧ ಪಟ್ಟ ರಾಜ್ಯಕ್ಕೆ ಸೇರಿಸಬೇಕು.

ಒಂದು ಭಾಷೆಯ ರಾಜ್ಯದಲ್ಲಿ ಬೇರೆ ಭಾಷೆ ಮಾತನಾಡುವವರು ಸಾಧ್ಯವಾದಷ್ಟು ಕನಿಷ್ಟ ಜನ ಮಾತ್ರ ಉಳಿಯುವಂತಾಗಬೇಕಾದರೆ ಇದು ಏಕಮಾತ್ರ ಪ್ರಜಾಸತ್ತಾತ್ಮಕ ಸೂತ್ರ. ಹೀಗಾದಾಗ ಮಾತ್ರವೇ ವಿವಿಧ ಭಾಷಾ ಗುಂಪುಗಳ ಜನತೆಯಲ್ಲಿ ಸಮಾನತೆಯ ಭರವಸೆ, ತನ್ನ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳ ಬಗ್ಗೆ ಭರವಸೆ, ತಮ್ಮ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಹಾರಗಳನ್ನು ತಮ್ಮದೇ ಭಾಷೆಯಲ್ಲಿ ನಡೆಸಲಾಗುವುದೆಂಬ ಭರವಸೆ ಉಂಟಾಗಲು ಸಾಧ್ಯ.

ಗಡಿ ಮರು ಹೊಂದಾಣಿಕೆಯ ಜೊತೆಗೇ ಎಲ್ಲಾ ಶಿಕ್ಷಣವನ್ನು ತಮ್ಮ ಮಾತೃಭಾಷೆಯ ಮೂಲಕವೇ ಪಡೆಯುವ, ರಾಜ್ಯದ ಭಾಷೆಯನ್ನು ಎರಡನೇ ಭಾಷೆಯಾಗಿ ಕಲಿಯುವ, ಎಲ್ಲಾ ರಾಜಕೀಯ, ಆರ್ಥಿಕ, ಸರ್ಕಾರೀ ಹಾಗೂ ಸಾಮಾಜಿಕ ವಲಯಗಳಲ್ಲಿ ಸಮಾನ ಹಕ್ಕುಗಳ ಸೂಕ್ತ ಭರವಸೆ ಎಲ್ಲಾ ಭಾಷಾ ಅಲ್ಪ ಸಂಖ್ಯಾತರಿಗೆ ಒದಗಿಸಬೇಕು.

ಮಹಾಜನ್ ಆಯೋಗ ತನ್ನದೇ ಸೂತ್ರಗಳನ್ನು ನಿರೂಪಿಸಿ ಈ ರೀತಿ ಅಭಿಪ್ರಾಯ ಪಟ್ಟಿದೆ.

15 ಸಾವಿರದಿಂದ ಇಪ್ಪತ್ತು ಸಾವಿರದಷ್ಟಾದರೂ ಜನರಿರುವ ಒಂದು ಪ್ರದೇಶ ಘಟಕವಾಗಿರಬೇಕು. ಒಂದೇ ಭಾಷೆಯನ್ನಾಡುವ ಜನರು ಬಹು ಸಂಖ್ಯೆ ಮಾತ್ರವಲ್ಲ, ಅವರು ಗಮನಾರ್ಹ ಬಹುಸಂಖ್ಯೆ ಪಡೆದಿರಬೇಕು; (100ರಲ್ಲಿ 51 ಇದ್ದರೆ ಸಾಲದು ಶೇ 70–80 ಇರಬೇಕುಎಂಬ ಅರ್ಥ) ಭೌಗೋಳಿಕ ನಿಕಟತೆ ಮಾತ್ರವಲ್ಲ, ಆಡಳಿತಾತ್ಮಕ, ಭೌಗೋಳಿಕ ಹಾಗೂ ಸಂಪರ್ಕ ಸೌಲಭ್ಯಗಳನ್ನು ಹೊಂದಿರಬೇಕು. ಇಲ್ಲವಾದರೆ ಭಾಷಾ ಹೊಂದಾಣಿಕೆಯ ಶಿಫಾರಸು ಮಾಡುವುದು ಸಾಧ್ಯವಿಲ್ಲ ಎಂದು ಈ ಆಯೋಗ ಹೇಳುತ್ತದೆ.

ಒಂದೊಂದು ಕಡೆ ಒಂದೊಂದು ಅಳತೆಗೋಲು

1. ತಾನೇ ಸೂಚಿಸಿದ ಈ ಸೂತ್ರಗಳನ್ನು ಕೂಡಾ ಆಯೋಗ ಸಮಾನವಾಗಿ, ನಿಷ್ಪಕ್ಷಪಾತವಾಗಿ ಅನ್ವಯಿಸಿಲ್ಲ. ಮೈಸೂರು ರಾಜ್ಯಕ್ಕೆ ಇತರ ರಾಜ್ಯಗಳ ಪ್ರದೇಶಗಳ ವರ್ಗಾವಣೆಗೆ ಶಿಫಾರಸು ಮಾಡಲು ಬಳಸಿದ ಅಳತೆ ಗೋಲನ್ನೇ ಮಹಾರಾಷ್ಟ್ರ ಕೇಳಿರುವ ಪ್ರದೇಶಗಳ ಬಗ್ಗೆ ಆಯೋಗ ಬಳಸಿದ್ದರೆ ಇನ್ನೂ ಹೆಚ್ಚು ಪ್ರದೇಶಗಳನ್ನು ಮಹಾರಾಷ್ಟ್ರದಲ್ಲಿ ಸೇರಿಸಲು ಅದು ಶಿಫಾರಸು ಮಾಡಬೇಕಾಗಿತ್ತು.

2. ಕೊಂಕಣಿ ಒಂದು ಪ್ರತ್ಯೇಕ ಭಾಷೆ ಎಂದು ಆಯೋಗ ಪರಿಗಣಿಸಿ ತನ್ನೆಲ್ಲಾ ಲೆಕ್ಕಾಚಾರದಲ್ಲಿ ಕೊಂಕಣಿ ಭಾಷೆಯನ್ನಾಡುವ ಜನರನ್ನು ಮರಾಠೀ ಭಾಷೆಯನ್ನಾಡುವ ಜನರಿಂದ ಪ್ರತ್ಯೇಕವಾಗಿ ಪರಿಗಣಿಸಿದೆ. ಇದು ನ್ಯಾಯಬದ್ಧವಾಗಿರಬಹುದು, ಅಥವಾ ಇಲ್ಲದಿರಬಹುದು. ಆದರೆ ಮರಾಠಿಯಲ್ಲದೆ ಬೇರೆ ಭಾಷೆಗಳನ್ನಾಡುವ ಜನ ಮಹಾರಾಷ್ಟ್ರದ ಏಕ ಭಾಷಾ ರಾಜ್ಯಕ್ಕೆ ಸೇರಿಸಲ್ಪಟ್ಟರೆ ನ್ಯಾಯ ಪಡೆಯಲಾರರು, ಆದರೆ ಇನ್ನೊಂದು ಏಕ ಭಾಷಾ ರಾಜ್ಯವಾದ ಮೈಸೂರಿಗೆ ವರ್ಗಾಯಿಸಲ್ಪಟ್ಟರೆ, ಅಥವಾ ಅಲ್ಲೇ ಉಳಿದರೆ ಮಾತ್ರ ನ್ಯಾಯ ಪಡೆಯಲು ಸಾಧ್ಯ ಎಂಬುದರ ಮೇಲೆ ಆಯೋಗ ನಿರ್ಧಾರಕ್ಕೆ ಬಂದಿರುವುದು ಅಸಮರ್ಥನೀಯ. ಆಯೋಗದ ವರದಿ ಉದ್ದೇಶ ಪೂರಿತವಾಗಿದೆ ಎಂಬುದನ್ನು ಇದು ಬಯಲಿಗೆಳೆದಿದೆಯಷ್ಟೆ.

3. ಬೆಳಗಾವಿ ನಗರದ ಪ್ರಶ್ನೆಯನ್ನು ಪರಿಶೀಲಿಸುವಾಗ ಆಯೋಗದ ಈ ಕಾಮಾಲೆ ಪೀಡಿತ ದೃಷ್ಟಿಕೋನ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ನಗರ ಹಾಗೂ ಅದರ ಬಡಾವಣೆಗಳ ಜನ ಸಂಖ್ಯೆ 1 ಲಕ್ಷ 80 ಸಾವಿರ. ಅದರಲ್ಲಿ 48./. ಮರಾಠಿ ಮಾತನಾಡುವವರು, 27./. ಕನ್ನಡ ಮಾತನಾಡುವವರು ಹಾಗೂ ಉಳಿದ 25./. ಇತರ ಭಾಷೆಗಳನ್ನಾಡುವವರು.

52./. ಮರಾಠಿಯೇತರ ಜನ ಮಹಾರಾಷ್ಟ್ರದ ಏಕ ಭಾಷಾ ರಾಜ್ಯಕ್ಕೆ ಸೇರಿಸಲ್ಪಟ್ಟರೆ ನ್ಯಾಯ ಪಡೆಯಲಾರರು, ಆದರೆ 73 /. ಕನ್ನಡೇತರ ಜನ ಮೈಸೂರಿನ ಏಕ ಭಾಷಾ ರಾಜ್ಯದಲ್ಲೇ ಮುಂದುವರಿದರೆ ನ್ಯಾಯ ಪಡೆಯುತ್ತಾರೆ ಎಂಬ ವಿಚಿತ್ರ ತರ್ಕವನ್ನು ಮಹಾಜನ್ ಆಯೋಗ ಹೂಡಿದೆ.

ಅಲ್ಲದೆ, ಮಹಾರಾಷ್ಟ್ರ ಪ್ರದೇಶದಲ್ಲಿರುವ ಬೆಳಗಾವಿ ನಗರದ ನೀರು ಪೂರೈಕೆ ಕೇಂದ್ರವನ್ನು ಒಂದು ಕಿರು

(6ನೇ ಪುಟ ನೋಡಿ)

(4ನೇ ಪುಟದಿಂದ)

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಮಾತುಗಳನ್ನೇ ನೋಡೋಣ. ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸಿದ್ದಯ್ಯ ಪುರಾಣಿಕರು "ಕಾವ್ಯಾನಂದ" ಎಂಬ ಕಾವ್ಯನಾಮದ ಕವಿ, ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಐ.ಎ.ಎಸ್, ಅಧಿಕಾರಿಯೂ ಹೌದು. ಅವರು ಅಧ್ಯಕ್ಷೀಯ ಭಾಷಣದಲ್ಲಿ ಸಾಹಿತ್ಯದ ಬಗೆಗಿನ ಚಿಂತನೆಗಿಂತ ರಾಜಕೀಯ, ಆಡಳಿತಾತ್ಮಕ ವಿಚಾರಗಳನ್ನೇ ಹೆಚ್ಚಾಗಿ ಪ್ರಸ್ತಾಪ ಮಾಡಿದರೆಂದು ಪತ್ರಿಕೆಗಳು ಟೀಕಿಸಿವೆ. ಇಂದಿನ ರಾಜಕೀಯ ಸಾಮಾಜಿಕ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ. ಕಸಾಪದಂತಹ ಗೋಪುರದ ಸಂಸ್ಥೆಗಳಲ್ಲಿಯೂ ಇದು ಅನಿವಾರ್ಯವಾಗಿದೆ ಎಂಬುದನ್ನು ಇದು ಸಾಬೀತುಪಡಿಸುತ್ತದೆ.

ಅಸಮಾನತೆ, ಸಮಾಜವಿರೋಧಿ ಕೃತ್ಯಗಳು ಹಾಗೂ ಜಾತಿ, ಧರ್ಮಗಳ ಹೆಸರಿನಲ್ಲಿ ಶೋಷಣೆಯ ವಿರುದ್ಧ ಹೋರಾಡಲು ಕರೆ ಕೊಡುತ್ತಾರೆ ಕವಿ. ರಾಜ್ಯಗಳಿಗೆಹೆಚ್ಚು ಸ್ವಾಯತ್ತತೆಗಾಗಿ, ಕೋಮುವಾದಿ ಪಕ್ಷಗಳನ್ನು ಬ್ಯಾನ್ ಮಾಡಲು, ಸರ್ವಸಾಮಾನ್ಯ ಸಿವಿಲ್ ಕೋಡ್ (ಶ್‌ರಿಯತ್ ಆಧಾರಿತ ಮುಸ್ಲಿಂ ಕಾಯಿದೆ, ಹಿಂದೂಕಾಯಿದೆ, ಕ್ರಿಶ್ಚಿಯನ್ ಕಾಯಿದೆಗಳ ಬದಲಾಗಿ) ವಿವಿಧ ಪಕ್ಷಗಳು ಪಡೆದ ಓಟುಗಳ ಪ್ರಮಾಣದ ಮೇಲೆ ಆಧಾರಿತವಾದ ಪ್ರಾತಿನಿಧ್ಯ, ರಾಜ್ಯಪಾಲರು,ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಇವರ ನೇಮಕದ ಮೇಲೆ ಸಂಸತ್ತಿನ ಹಿಡಿತ ಇವುಗಳನ್ನು ಬಯಸುತ್ತಾರೆ ಸಿದ್ದಯ್ಯ ಪುರಾಣಿಕರು.

ಭಾರತದ ಎಲ್ಲಾ ಭಾಷೆಗಳ ಜನರಿಗೂ ಕರ್ನಾಟಕದಲ್ಲಿ ವಾಸ ಮಾಡುವ ಎಲ್ಲರಿಗೂ ಅವಶ್ಯವಾದ ಈ ಮಾರ್ಪಾಡುಗಳಿಗಾಗಿ ಹೋರಾಡುವುದಕ್ಕಾಗಿ ಕರೆ ಕೊಡುವುದರ ಜೊತೆಯಲ್ಲಿಯೇ ಮಹಾಜನ್ ವರದಿಯ ಜಾರಿಗಾಗಿ ಒತ್ತಾಯಿಸುತ್ತಾರೆ.

ಪ್ರತಿಯೊಬ್ಬ ಭಾಷಾ ಅಲ್ಪಸಂಖ್ಯಾತರಿಗೂ ಅವರ ಮಾತೃ ಭಾಷೆಯನು ಕಲಿಯಲು ಅವಕಾಶವಿರಬೇಕು, ಈ ಎಲ್ಲಾ ಜನರ ಮಾತೃಭಾಷೆಗಳಿಗೆ ವಿರೋಧವಾದ ಸಂಸ್ಕೃತ, ಇಂಗ್ಲಿಷ್ ಹಿಂದಿಗಳ ಹೇರಿಕೆಯ ವಿರುದ್ಧ, ಇಂಗ್ಲಿಷ್ ಶಿಕ್ಷಣ ಮಾಧ್ಯಮದ ಹುಚ್ಚನ್ನು (ರಾಜೀವ್ ಗಾಂಧಿಯವರ 'ನೂತನ ಶಿಕ್ಷಣ ನೀತಿ'ಯ ಅಂಗವಾದ) ಮಾದರಿ ಶಾಲೆಗಳ ಶಿಕ್ಷಣ ಪದ್ಧತಿಯನ್ನು ವಿರೋಧಿಸುವ ಇವರು ಅದೇ ಸಮಯದಲ್ಲಿ ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ಪೂರ್ಣವಾಗಿ ಜಾರಿಗೊಳಿಸಬೇಕು ಎಂದು ಕರ್ನಾಟಕದಲ್ಲಿ ಕನ್ನಡಿಗರಿಗೆ ಮಾತ್ರ ಕೆಲಸ ಎಂಬ ಮಣ್ಣಿನ ಮಕ್ಕಳ ವಾದವನ್ನು ಪುಷ್ಟೀಕರಿಸುತ್ತಾರೆ.

ಅದೇ ವೇದಿಕೆಯಲ್ಲಿ ಮಾತನಾಡಿರುವ ನಿಜಲಿಂಗಪ್ಪನವರು ಕನ್ನಡ ರಾಜ್ಯೋದಯಕ್ಕಾಗಿ ಕಂಡ ಕನಸು ನನಸಾಗಿಲ್ಲ ಇಂದು ಶೇ. 70 ರಷ್ಟಾದರೂ ವಿದ್ಯಾವಂತರಾಗಿರಬೇಕಾಗಿತ್ತು, 50 ಲಕ್ಷ ಎಕರೆ ನೀರಾವರಿ ಯಾಗಬೇಕಿತ್ತು. ಜನತೆ ಪ್ರತಿಭಟಿಸಬೇಕು ಎಂದು ಕರೆ ನೀಡಿದ್ದಾರೆ. ಅದೇ ಧ್ವನಿಯಲ್ಲಿಯೇ ಮಹಾಜನ್ ವರದಿ ಕಾರ್ಯಗತವಾಗಬೇಕು ಎಂದು ಒತ್ತಾಯಿಸಿದ್ದಾರೆ.

ಈ ರೀತಿಯ ದ್ವಂದ್ವ ಎಲ್ಲಾ ಕನ್ನಡ ಸಾಹಿತಿಗಳ, ಪತ್ರಿಕೆಗಳ ಅಭಿಪ್ರಾಯಗಳಲ್ಲಿ ಪ್ರತಿಫಲಿತವಾಗುತ್ತಿವೆ. ವಿವಿಧ ವ್ಯಕ್ತಿ ಪತ್ರಿಕೆಗಳಲ್ಲಿ ವಿವಿಧ ಪ್ರಮಾಣದಲ್ಲಿ ಪ್ರತಿ ಫಲಿತವಾಗುತ್ತಿವೆ. ಕರ್ನಾಟಕದ ಕನ್ನಡಿಗರ ಅಭಿವೃದ್ಧಿ ಅಥವಾ ಹಿಂದುಳಿಕೆ ಈ ದೇಶದ ಎಲ್ಲಾ ಜನರ ಅಭಿವೃದ್ಧಿ ಹಾಗೂ ಹಿಂದುಳಿಕೆಯ ಪ್ರಶ್ನೆಯೊಂದಿಗೆ ಹೊಂದಿಕೊಂಡ ಪ್ರಶ್ನೆ ಯಾಗಿವೆ ಎಂಬುದನ್ನು ಯಾರು ಪರಿಗಣಿಸಿದ್ದಾರೊ ಅವರು ಹೆಚ್ಚು ಪ್ರಜಾಸತ್ತಾತ್ಮಕ ಅಭಿಪ್ರಾಯಗಳನ್ನು ಪ್ರಚಾರ ಮಾಡುತ್ತಿದ್ದರೆ ಕನ್ನಡ ಭಾಷೆಯ ಪ್ರಶ್ನೆಯನ್ನು ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯ ಪ್ರಶ್ನೆಯಿಂದ ಹೊರತು ನೋಡುವವರು ಹೆಚ್ಚು ಹೆಚ್ಚು ಅನೈಕ್ಯತೆಯ, ವಿಚ್ಛಿದ್ರಕಾರಿ ಭಾವನೆಗಳನ್ನು ಬಿತ್ತುತ್ತಾ ಗಡಿ ಪ್ರಶ್ನೆ, ವಲಸೆಯ ಪ್ರಶ್ನೆಗಳನ್ನೇ ದುರ್ಬೀನು ಹಾಕಿ ನೋಡುತ್ತಾರೆ. ಹೀಗೆ ವಿವಿಧ ಪ್ರಮಾಣದಲ್ಲಿ ವಿವಿಧ ರಾಜ್ಯೋತ್ಸವ ವೇದಿಕೆಗಳಿಂದ ಹೊರ ಹೊಮ್ಮಿದ ಅಭಿಪ್ರಾಯಗಳಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ವ್ಯಕ್ತವಾದ ಬಹಳ ಪಟ್ಟಿಗೆ ಹೊಣೆಯರಿತ ಮಾತುಗಳು ಕಡಿಮೆ ಉದ್ವೇಗ, ಉದ್ರೇಕಗಳು ಹೆಚ್ಚು.

ಇಂತಹ ಎಲ್ಲಾ ಪ್ರಚಾರಗಳಲ್ಲಿ ಸಾಮಾನ್ಯ ಜನರ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುವ ಭಾವನೆಗಳನ್ನು ಬೆಂಬಲಿಸಿ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಬೆಳೆಸಬೇಕು ಅದೇ ರೀತಿಯಲ್ಲಿ ವಿಚ್ಛಿದ್ರಕಾರಿ ಭಾವನೆಗಳ ವಿರುದ್ಧ ಹೋರಾಡಬೇಕು ಕನ್ನಡ ಜನರ ಮನಸ್ಸಿನಿಂದ ತೊಲಗಿಸಬೇಕು.

ಕರ್ನಾಟಕಕ್ಕಾಗಿ ಹೋರಾಡುತ್ತಿದ್ದ ಕನ್ನಡ ಜನರಂತೆ ತಮ್ಮ ತಮ್ಮ ರಾಜ್ಯಗಳಿಗಾಗಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಡುತ್ತಿದ್ದ ಆ ಜನರ ಆಸೆ ಆಕಾಂಕ್ಷೆಗಳು ಕೈಗೂಡಿಲ್ಲ ಎಂಬುದು ಸ್ಪಷ್ಟ. ಈ ಅಪೂರ್ಣ ಆಕಾಂಕ್ಷೆಗಳ ಈಡೇರಿಕೆಗಾಗಿ ಕನ್ನಡ ಜನರು ಹೋರಾಡಬೇಕಾಗಿದೆ. ಈ ಆಕಾಂಕ್ಷೆಗಳು ಎಲ್ಲಾ ರಾಜ್ಯಗಳ ಜನರ ಆಕಾಂಕ್ಷೆಗಳೂ ಆಗಿರುವದರಲ್ಲಿಯೇ ಐಕ್ಯತೆಯ ಎಳೆಗಳಿವೆ. ಇದಕ್ಕಾಗಿ ಮತ್ತೆ ಏಕೀಕರಣ ಕಾಲದ ಹುಮ್ಮಸು ಉತ್ಸಾಹಗಳನ್ನು ಮೈಗೂಡಿಸಿಕೊಂಡು ಎಲ್ಲಾ ಭಾಷೆಗಳ ಜನರ ಜೊತೆಗೂಡಿ ಹೋರಾಡಬೇಕಾಗಿದೆ.

ದ.ಕ. ಜಿಲ್ಲೆಯಾದ್ಯಂತ ಬೀಡಿ ಕಾರ್ಮಿಕರ ಸಮಾವೇಶಗಳು

ಕುಪ್ಪೆ ಪದವು

ಕುಪ್ಪೆ ಪದವು ಪ್ರದೇಶ ಬೀಡಿ ಕಾರ್ಮಿಕರ ಸಮಾವೇಶ ನವಂಬರ್ 14 ರಂದು ಸಂಘದ ಅಧ್ಯಕ್ಷ ಕಾ|| ಸುಂದರ ನಾಯ್ಕ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾ|| ನೀಲಯ ನಾಯ್ಕ ಕಾ|| ವಸಂತ ಆಚಾರಿ ಶುಭಕೋರಿ ಮಾತನಾಡಿದರು. ಪ್ರವಿಡೆಂಟ್‌ಫಂಡ್ ನೀಡುವಲ್ಲಿ ನಡೆಯುತ್ತಿರುವ ಮೋಸದ ಬಗ್ಗೆ, ಕನಿಷ್ಟ ಕೂಲಿ ಜ್ಯಾರಿ, 20% ಬೋನಸ್ಸು ನಿಗಧಿ ಪಡಿಸಲು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ಸಮಾವೇಶಕ್ಕೆ ದ. ಕ. ಜಿಲ್ಲಾ ಬೀಡಿ ಫೆಡರೇಷನ್ ಕೋಶಾಧಿಕಾರಿಯವರಾದ ಕಾ|| ಜೆ. ಬಾಲಕೃಷ್ಣ ಶೆಟ್ಟಿಯವರು ಆಗಮಿಸಿ ಮೂರು ಪ್ರಮುಖ ಬೇಡಿಕೆಗಳ ಕುರಿತು ಮಾತನಾಡಿದರು. ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯ ನವರು ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಉನ್ನತ ಮಟ್ಟದ ರಾಜಕೀಯ ಭ್ರಷ್ಟಾಚಾರದ ರಾಜೀವ ಗಾಂಧಿ ಸರ್ಕಾರ ರಾಜೀನಾಮೆಗೆ ಒತ್ತಾಯಿಸಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟಕ್ಕೆ ಬೆಂಬಲ ನೀಡಲು ಕರೆ ನೀಡಿದರು. ಡಿ. ವೈ. ಎಫ್. ಐ. ಕಾರ್ಯಕರ್ತರಿಂದ 'ಒಂದು ಪ್ರಶ್ನೆ' ಕಿರು ನಾಟಕವನ್ನು ಪ್ರದರ್ಶಿಸಲಾಯಿತು. ಸಮಾವೇಶದ ಪ್ರಾರಂಭದಲ್ಲಿ ಕಾ|| ವಾಸುದೇವ ಆಚಾರಿ ಸ್ವಾಗತಿಸಿ ಕೊನೆಯಲ್ಲಿ ಕಾ|| ಸದಾಶಿವ ದಾಸ್ ವಂದಿಸಿದರು. ದ. ಕ. ಜಿಲ್ಲಾ ಬೀಡಿ ಸಮ್ಮೇಳನಕ್ಕೆ 60 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಮೂಡಬಿದ್ರೆ

ಮೂಡ ಬಿದ್ರೆ ಬೀಡಿ ಕೆಲಸಗಾರರ ಸಂಘದ ಕಾರ್ಮಿಕರ ಸಮಾವೇಶ ನವಂಬರ್ 15 ರಂದು ತೋಡಾರು ಗ್ರಾಮದಲ್ಲಿ ನಡೆಯಿತು. ಮೂಡಬಿದ್ರೆ, ಕೆಲ್ಲ ಪುತ್ತಿಗೆ, ಸಂಪಿಗೆ, ಮಾಸ್ತಿಕಟ್ಟೆ, ಕಾಂತರೆ, ಮಿಜಾರು, ತೋಡಾರು, ಮಾರ್ನಾಡು, ಹೊಸ ಬೆಟ್ಟುಗಳಿಂದ ಸುಮಾರು 200 ಪ್ರತಿನಿಧಿಗಳು ಭಾಗವಹಿಸಿದರು. ಕಾರ್ಯದರ್ಶಿ ಕಾ|| ರಮಣಿ ಸ್ವಾಗತಿಸಿ ಕಾ|| ಸಂಜೀವ ಬಂಗೇರ ಅಧ್ಯಕ್ಷತೆವಹಿಸಿದ್ದರು. ದ. ಕ. ಜಿಲ್ಲಾ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಪ್ರಾವಿಡೆಂಟ್ ಫಂಡ್, ಶೇ. 20 ಬೋನಸ್ಸು, 15 ರೂ. ಕನಿಷ್ಟ ಕೂಲಿ ನಿಗಧಿ ಮುಂತಾದ ಬೇಡಿಕೆಗಳ ಠರಾವು ಅಂಗೀಕರಿಸಲಾಯಿತು. ಕಾ|| ಬಾಲಕೃಷ್ಣ ಶೆಟ್ಟಿ ಯವರು ಮಾತನಾಡಿ ಡಿಸಂಬರ್ 13 ರ ಜಿಲ್ಲಾ ಸಮಾವೇಶವನ್ನು ಯಶಸ್ವಿಗೊಳಿಸಲು ಕರೆ ನೀಡಿದರು. ಕಾ|| ಜಿ. ಬಾಲಕೃಷ್ಣ ಶೆಟ್ಟಿ ಧನ್ಯವಾದದೊಂದಿಗೆ ಸಭೆ ಮುಕ್ತಾಯಗೊಂಡಿತು.

ಗುರುಪುರ-ಸುರತ್ಕಲ್

ಗುರುಪುರ ಸುರತ್ಕಲ್‌ಪ್ರದೇಶ ಬೀಡಿ ಲೇಬರ್ ಯೂನಿಯನ್ ಕಾರ್ಮಿಕರ ಸಮಾವೇಶ ನವಂಬರ್ 8 ರಂದು ಗಂಜಿಮಠ ಸಂಘದ ಕಛೇರಿಯಲ್ಲಿ ಜರುಗಿತು. ಬೀಡಿ ಫೆಡರೇಷನ್‌ಜಿಲ್ಲಾ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯನವರು ಬೀಡಿ ಕಾರ್ಮಿಕರ ಹೋರಾಟದ ಪರಂಪರೆಯನ್ನು ವಿವರಿಸಿದರು. ಕಾ|| ವಾಸುದೇವ ಆಚಾರಿ, ಕಾ|| ಎಂ. ಎಸ್. ನಾರಾಯಣ, ಕಾ|| ಹರಿಚಂದ್ರ, ಕಾ|| ಶ್ರೀರಿಲ್ ಪಿಂಟೋ ಶುಭಕೋರಿ ಮಾತನಾಡಿದರು. ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಕಾ|| ಎಂ. ಹೊನ್ನಯ್ಯ ಧನ್ಯವಾದ ವಿತ್ತರು.

ಬಂಟ್ವಾಳ ತಾಲೋಕು

ಬಂಟ್ವಾಳ ತಾಲ್ಲೋಕು ಬೀಡಿ ಕೆಲಸಗಾರರ ಸಂಘದ 11 ನೇ ವಾರ್ಷಿಕ ಮಹಾಸಭೆ ನವಂಬರ್ 22 ರಂದು ಕಾ|| ಬಿ. ಹೂವಯ್ಯ ಬಂಗೇರರ ಅಧ್ಯಕ್ಷತೆಯಲ್ಲಿ ಜರುಗಿತು. ಮೊದಲಿಗೆ ಕಾ|| ಬಿ. ಸಂಜೀವ ಬಂಗೇರ ಸ್ವಾಗತಿಸಿ ಗತ ವರ್ಷದ ಲೆಕ್ಕ ಪತ್ರಮಂಡಿಸಿದರು. ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ಕಾರ್ಯದರ್ಶಿ ಕಾ|| ಬಿ. ವಾಸುಗಟ್ಟಿ ಹಾಗೂ ಬೀಡಿ ಫೆಡರೇಷನ್ ಜಿಲ್ಲಾ ಕಾರ್ಯದರ್ಶಿ ಕಾ|| ಯು. ಬಿ. ಲೋಕಯ್ಯ ಮಾತನಾಡಿ ಕೇಂದ್ರದ ರಾಜೀವ ಗಾಂಧಿ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿರುವುದರಿಂದ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು.

ನಾಲ್ಕು ಎಡ ಪಕ್ಷಗಳು ದೇಶದ ಮುಂದಿಟ್ಟಿರುವ 17 ಅಂಶಗಳ ಪರ್ಯಾಯ ಕಾರ್ಯಕ್ರಮ ಬೆಂಬಲಿಸಿ ನಿರ್ಣಯ ಕೈಗೊಳ್ಳಲಾಯಿತು. ನೂತನ ವರ್ಷಕ್ಕೆ ಕಾ|| ಬಿ.ಹೂವಯ್ಯ ಬಂಗೇರ (ಅಧ್ಯಕ್ಷ) ಬಿ. ರುಕ್ಮಯ್ಯ ಪೂಜಾರಿ, ಶ್ರೀಮತಿ ಗಿರಿಜಾ (ಉಪಾಧ್ಯಕ್ಷರು) ಸಂಜೀವ ಗಂಗೇರ (ಪ್ರ. ಕಾರ್ಯದರ್ಶಿ) ಬಿ. ಎ. ಗೋಪಾಲ ಗೌಡ, ಹೊಸ ಮಾರು, ಶ್ರೀಮತಿ ವಿಮಲ (ಸಹ ಕಾರ್ಯದರ್ಶಿಗಳು) ಬಿ. ವಾಸುಗಟ್ಟಿ ಕೋಶಾಧಿಕಾರಿಯಾಗಿರುವ ಸಮಿತಿ ಆಯ್ಕೆ ಮಾಡಲಾಯಿತು.

ಉಡುಪಿ

ಬೀಡಿ ಅಂಡ್ ಟೋಬೆಕೋ ಲೇಬರ್ ಯೂನಿಯನ್ ವಾರ್ಷಿಕ ಮಹಾ ಸಭೆ ನವಂಬರ್ 8 ರಂದು ಉಡುಪಿಯ ಅಂಬಾಗಿಲಿನಲ್ಲಿ ಕಾ|| ಬೇಬಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಿ. ಐ. ಟಿ. ಯು. ಅಖಿಲ ಭಾರತ ನಾಯಕರಾದ ಕಾ|| ನೃಸಿಂಗ್ ಚಕ್ರವರ್ತಿ, ವಿ. ಪಿ. ಚಿಂತನ್‌ರ ಮರಣಕ್ಕೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾ|| ರಮೇಶ್ ಮೆಂಡನ್, ಸುಬ್ರಾಯ ನಾಯ್ಕ, ಗುರುರಾಜ್ ಸೆಟ್ಟಿಗಾರ, ಸಂಜೀವ ನಾಯ್ಕ, ಗುರುರಾಜ ಸೆಟ್ಟಿಗಾರ್ ಶುಭಕೋರಿ ಮಾತನಾಡಿದರು.

ನಗರಸಭಾ ಸದಸ್ಯರಾದ ಕಾ|| ಕಾಳಪ್ಪ ಶೆಟ್ಟರು ಮುಖ್ಯ ಅತಿಥಿಗಳಾಗಿ ಮಾತನಾಡಿ ಕಾರ್ಮಿಕ ಚಳುವಳಿಯ ದೀರ್ಘ ಕಾಲದ ಚರಿತ್ರೆಯನ್ನು ನೆನಪಿಸಿದರು. ಬಲಿಷ್ಟ ಸಂಘಟನೆ ಕಟ್ಟಲು ಕರೆ ನೀಡಿದರು.

ಕಾ|| ಡೇವಿಡ್ ಕರ್ಕಡ್ ರವರು ಮಾತನಾಡಿ ದೇಶದ ಕಾರ್ಮಿಕ ಚಳುವಳಿಯ ಮುನ್ನಡೆಯಲ್ಲಿ ಸಿ.ಐ. ಟಿ.ಯು. ಬೆಳವಣಿಗೆ ಕುರಿತು ಹಾಗೂ ಐಕ್ಯ ಹೋರಾಟಗಳ ಪ್ರಾಮುಖ್ಯತೆ ವಿವರಿಸಿದರು. ಆರ್ಥಿಕ ಬೇಡಿಕೆಗೆ ಹೋರಾಡುವುದರೊಂದಿಗೆ ರಾಜಕೀಯವಾಗಿ ಜಾಗೃತರಾಗಬೇಕು, ವ್ಯವಸ್ಥೆಯ ಬದಲಾವಣೆಗೆ ದುಡಿಯಬೇಕೆಂದು ಕರೆ ನೀಡಿದರು.

ಕಾ|| ಗುರುವ ಪೂಜಾರಿ (ಅಧ್ಯಕ್ಷ) ಬೇಬಿ, ಸುನಂದ (ಉಪಾಧ್ಯಕ್ಷರು) ಎನ್.ಸಾಧು ಅಮೀನ್ (ಪ್ರ.ಕಾರ್ಯದರ್ಶಿ) ಗಿರಿಜ ಮತ್ತು ನಾಗಪ್ಪಪೂಜಾರಿ (ಜೊತೆ ಕಾರ್ಯದರ್ಶಿ) ಕೆ. ರಾಘವ ಪೂಜಾರಿ ಕೋಶಾಧಿಕಾರಿಯಾಗಿರುವ ಕಮಿಟಿ ಆಯ್ಕೆ ಮಾಡಲಾಯಿತು. ಸಾಧು ಪೂಜಾರಿ ಸ್ವಾಗತಿಸಿ ಗುರುವ ಪೂಜಾರಿ ಧನ್ಯವಾದ ವಿತ್ತರು. ○

ಮಹಾಜನ್ ಆಯೋಗದ ಶಿಫಾರಸುಗಳನ್ನು ಕುರಿತು

(5ನೇ ಪುಟದಿಂದ)

ದಾರಿಯ ಮೂಲಕ ಪ್ರತ್ಯೇಕಿಸಿ ಮೈಸೂರು ಸರ್ಕಾರದ ಆಡಳಿತಕ್ಕೊಳಪಡಿಸಬೇಕೆಂದು ಮಹಾಜನ್ ಆಯೋಗ ಶಿಫಾರಸು ಮಾಡಿದೆ. ಇಲ್ಲವಾದರೆ ಮೈಸೂರಿನಲ್ಲಿಯೇ ಉಳಿಯಬೇಕೆಂದು ತಾನು ಶಿಫಾರಸು ಮಾಡಿರುವ ಬೆಳಗಾವಿ ನಗರ ನೀರು ಪೂರೈಕೆಗೆ ಅಪಾಯವಾಗಬಹುದೆಂದು ಅದು ಭಾವಿಸುತ್ತದೆ. ಆಯೋಗಕ್ಕೆ ಜನತೆಯ ಪ್ರಜಾಸತ್ತಾತ್ಮಕ ಭಾವನೆಗಳಿಗಿಂತ ಹೆಚ್ಚಾಗಿ ತನ್ನ ಆಳವಾದ ಪೂರ್ವಾಗ್ರಹ ಪೀಡಿತ ಹಾಗೂ ಬಲವಾದ ಉದ್ದೇಶಪೂರ್ಣ ದೃಷ್ಟಿಯೇ ಮುಖ್ಯವಾಗಿತ್ತೆಂಬುದಕ್ಕೆ ಇನ್ನೊಂದು ಎದ್ದು ಕಾಣುವ ಉದಾಹರಣೆಯಿದು.

4. ಖಾನಾಪುರ ತಾಲ್ಲೂಕಿನಸುಮಾರಾಗಿ ಎಲ್ಲರೂ ಮರಾಠಿ ಭಾಷೆಯನ್ನೇ ಆಡುವ 9ಸಾವಿರ ಜನರುಳ್ಳ ಸುಮಾರು 220 ಚದರ ಮೈಲಿ ಪ್ರದೇಶ ಭೌಗೋಳಿಕ ನಿಕಟತೆ ಹಾಗೂ ಭಾಷಾಏಕತೆಯ ದೃಷ್ಟಿಯಿಂದ ನೋಡಿದರೆ ಸ್ವಾಭಾವಿಕವಾಗಿ ಮಹಾರಾಷ್ಟ್ರಕ್ಕೆ ಸೇರಬೇಕಾಗಿತ್ತು. ಆದರೆ ವ್ಯಾಪಕ ಅರಣ್ಯ ಪ್ರದೇಶವನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾಯಿಸುವುದು ತನ್ನ ಕೆಲಸವಲ್ಲ ಎಂದು ಹೇಳಿ ಆಯೋಗ ಮಹಾರಾಷ್ಟ್ರದ ನಡುವೆ ಅಂಕುಡೊಂಕಾಗಿ ಚಾಚಿಕೊಂಡಂತಿರುವ ಈ ಪ್ರದೇಶವನ್ನು ಮೈಸೂರಿನಲ್ಲಿ ಇರಗೊಟ್ಟಿದೆ.

ಪ್ರಜಾಸತ್ತಾತ್ಮಕ ಸೂತ್ರ ಅಗತ್ಯ

5. ಇದೇ ರೀತಿ ಬೀದರ್‌ಜಿಲ್ಲೆಯ 60 ಶೇಕಡಾಕ್ಕೂಹೆಚ್ಚು ಮರಾಠಿಮಾತನಾಡುವ ತಾಲೂಕುಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಿಲ್ಲ. ಹೀಗೆ ಮಾಡಿದರೆ ಕೇವಲ 3 ತಾಲೂಕುಗಳು ಉಳಿಯುವ ಬೀದರ್ ಪ್ರತ್ಯೇಕ ಜಿಲ್ಲೆಯಾಗಿ ಮುಂದುವರೆಯಲು ಆಗುವುದಿಲ್ಲ ಎಂಬ ಕಾರಣಕ್ಕಾಗಿ ವರ್ಗಾಯಿಸಿಲ್ಲ ಎಂದು ಆಯೋಗದ ವಾದ.

6. ಮೈಸೂರು ಮತ್ತು ಕೇರಳದ ನಡುವಿನ ವಿವಾದಗ್ರಸ್ತ ಕಾಸರಗೋಡು ತಾಲೂಕಿನ ಸಂಬಂಧಪಟ್ಟಂತೆ ಮಹಾಜನ್ ಯಾವುದೇ ಸೂತ್ರಕ್ಕೆ ಬದ್ಧರಾಗಿಲ್ಲ. ಕಾಸರಗೋಡು ತಾಲೂಕನ್ನು ಪೂರ್ಣವಾಗಿ ನೋಡಿದಾಗ ಅದರಲ್ಲಿ 58% ದಷ್ಟಿರುವ ಮಲೆಯಾಳೀ ಮಾತನಾಡುವ ಜನ ಬಹು ಸಂಖ್ಯೆಯಲ್ಲಿದ್ದಾರೆ. ತುಳು ಮಾತನಾಡುವ ಜನ 23% ಹಾಗೂ ಕನ್ನಡ ಮಾತನಾಡುವ ಜನ ಕೇವಲ 12.5% ವೆಂಬುದನ್ನು ಒಪ್ಪಿಕೊಂಡರೂ ಚಂದ್ರಗಿರಿ ಮತ್ತು ಪಯುಸ್ವಿನಿ ನದಿಗಳ ಉತ್ತರ ಭಾಗದಲ್ಲಿರುವ ಎಲ್ಲಾ ಪ್ರದೇಶಗಳು ಹಾಗೂ ಹಳ್ಳಿಗಳನ್ನು ಆಡಳಿತ ಸೌಲಭ್ಯಕ್ಕಾಗಿ ಮೈಸೂರಿಗೆ ವರ್ಗಾಯಿಸಬೇಕೆಂಬ ತನ್ನ ಮನಬಂದಂತೆಏಕಪಕ್ಷೀಯ ನಿರ್ಧಾರವನ್ನು ಆಯೋಗ ಕೈಗೊಂಡಿದೆ. ಇದಕ್ಕೆ ಕಾರಣ ನೀಡುತ್ತಾ ಈ ಪ್ರದೇಶಗಳಲ್ಲಿ ಮಾತನಾಡುವ ಮಲೆಯಾಳೀ ಭಾಷೆ ಚಂದ್ರಗಿರಿ ನದಿಯ ದಕ್ಷಿಣದಲ್ಲಾಡುವ ಮಲೆಯಾಳಿಗಿಂತ ಭಿನ್ನವಾಗಿದೆ ಎಂಬ ವಿಚಿತ್ರವಾದ ಅವರು ಹೂಡಿದ್ದಾರೆ. ಒಂದೇ ಭಾಷೆ ಮಾತನಾಡುವ ಒತ್ತೊತ್ತಾಗಿರುವ ಪ್ರದೇಶಗಳು ಯಾವುದು ಎಂದು ಕಂಡುಹಿಡಿದು ಅದರ ಆಧಾರದ ಮೇಲೆ ಗಡಿಗಳನ್ನು ಮತ್ತೆ ನಿರೂಪಿಸಲು ಪ್ರಯತ್ನಿಸುವ ಗೋಜಿಗೇ ಅವರು ಹೋಗಿಲ್ಲ. ಚಂದ್ರಗಿರಿ ನದಿಯ ಉತ್ತರದಲ್ಲಿಡುವ ಮಲೆಯಾಳೀ ಭಾಷೆಯನ್ನಾಡುವ ಬಹು ಸಂಖ್ಯೆಯಹಳ್ಳಿಗಳುಮೈಸೂರಿಗೆವರ್ಗಾಯಿಸಲ್ಪಟ್ಟರೆ ಸಂತೋಷದಿಂದಿರುತ್ತದೆ ಎಂದಷ್ಟೇ ಅವರು ಒತ್ತಿ ಹೇಳುತ್ತಾರೆ.

ಆದ್ದರಿಂದ ಈ ಶಿಫಾರಸುಗಳನ್ನು ತಿರಸ್ಕರಿಸಿ,ಹಳ್ಳಿಯನ್ನು ಘಟಕವಾಗಿಟ್ಟುಕೊಂಡು ಮತ್ತು ಭೌಗೋಳಿಕ ನಿಕಟತೆಯ ಆಧಾರದ ಮೇಲೆ ರಾಜ್ಯಗಳ ಗಡಿಗಳ ಮರುನಿರೂಪಣೆನಡೆಸಲುಒತ್ತಾಯಿಸಬೇಕೆಂದುಸಿ.ಪಿ.ಐ.(ಎಂ)ನ ಪಾಲಿಟ್ ಬ್ಯೂರೋ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳಿಗೆ ದೇಶಾದ್ಯಂತ ಎಲ್ಲಾ ಜನರಲ್ಲಿ, ವಿಶೇಷವಾಗಿ ಮೈಸೂರು,ಮಹಾರಾಷ್ಟ್ರ ಹಾಗೂ ಕೇರಳದ ಎಲ್ಲಾ ಜನರಿಗೆ ಮನವಿ ಮಾಡುತ್ತದೆ. ಈ ರಾಜ್ಯಗಳಲ್ಲಿ ಭಾಷಾ ಅಲ್ಪಸಂಖ್ಯಾತರ ವಿರುದ್ಧ ಸಂಕುಚಿತ ಭಾವನೆಗಳನ್ನು ಎಬ್ಬಿಸಲು ಬಿಡಬಾರದೆಂದು ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ವಿನಂತಿಸಿಕೊಳ್ಳುತ್ತದೆ. ಕೇಂದ್ರದ ಕಾಂಗ್ರೆಸ್‌ಸರ್ಕಾರ ತನ್ನ ಒಡೆದುಆಳುವ ನೀತಿಯನ್ನು ತ್ಯಜಿಸಿ ಎಲ್ಲಾ ಭಾಷಾವಾರು ರಾಜ್ಯಗಳ ಗಡಿಗಳ ಹೊಂದಾಣಿಕೆಗೆ ಮತ್ತು ತನ್ಮೂಲಕ ವಿಭಿನ್ನ ಭಾಷಾವಾರು ರಾಜ್ಯಗಳ ನಡುವೆ ಬಲವಾದ ಸೋದರಬಂಧಗಳನ್ನು ಬೆಸೆಯಲು ನೆರವಾಗುವ ಮೇಲೆ ಹೇಳಿದ ಪ್ರಜಾಸತ್ತಾತ್ಮಕ ಸೂತ್ರಗಳನ್ನು ಅಂಗೀಕರಿಸುವಂತೆ ಅದರ ಮೇಲೆ ಒತ್ತಡ ತರುವುದು ಎಲ್ಲಾ ಭಾಷಾವಾರು ರಾಜ್ಯಗಳ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ವ್ಯಾಪಕವಾಗಿ ಅಣಿನೆರೆಸುವ ಮೂಲಕ ಮಾತ್ರವೇ ಸಾಧ್ಯ.

ಡಿಸಂಬರ್ 7, 1967

ಪೋರ್ಟ್ ಎಂಡ್ ಡೂಕ್ ವರ್ಕರ್ಸ್ ಯೂನಿಯನ್ ಮಹಾಸಭೆ

ಮಂಗಳೂರಿನ ಪೋರ್ಟ್ ಎಂಡ್ ಡೂರ್ಕ್ ವರ್ಕರ್ಸ್ ಯುನಿಯನ್ ಮಹಾಸಭೆ ನವಂಬರ್10ರಂದು ಹಳೇ ಬಂದರೆ ಕಛೇರಿಯಲ್ಲಿ ಕಾ.ಶ್ರೀಕ್ಲೇವಿಯರ್‌ಡಿ' ಸೋಜಾರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಕಾ ಬಿ.ಮಾಧವರವರು ಮಾತನಾಡುತ್ತಾ ಕಾರ್ಮಿಕರು ಸಂಘಟಿತರಾಗಿ ನಡೆಸಿದ ಹಲವಾರು ಹೋರಾಟಗಳ ಫಲವಾಗಿ ಕೆಲಸವಲತ್ತುಗಳನ್ನು ಪಡೆಯಲಾಗಿದೆ. ಹೋರಾಟದಿಂದ ಮಾತ್ರ ಕಾರ್ಮಿಕ ವರ್ಗ ತನ್ನ ಹಕ್ಕು ಸೌಲತ್ತುಗಳನ್ನು ಉಳಿಸಿಕೊಳ್ಳಲು ಸಾಧ್ಯವೆಂದು ಹೇಳಿದರು. ದೊಡ್ಡ ಪ್ರಮಾಣದಲ್ಲಿ ಸಂಘಟನೆಯನ್ನು ಕಟ್ಟಲು ಮುಂದಾಗಬೇಕೆಂದು ಅವರು ಕರೆನೀಡಿದರು. ವಾರ್ಷಿಕ ಮಹಾಸಭೆಯು ಕಾ.ಬಿ.ಮಾಧವ (ಅಧ್ಯಕ್ಷ)ಯು, ಸದಾನಂದಬಂಗೇರ (ಉಪಾಧ್ಯಕ್ಷ) ಸುನಿಲ್ ನಟೇಕರ್ (ಕಾರ್ಯದರ್ಶಿ), ನರಸಿಂಹ ಪಿ.ಎಸ್. (ಜೊತೆ ಕಾರ್ಯದರ್ಶಿ) ವಸಂತಶ್ರೀಯಾನ್ ಕೋಶಾಧಿಕಾರಿಯಾಗಿರುವ 11 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಸರ್ವಾನು ಮತದಿಂದ ಆರಿಸಲಾಯಿತು. ಕೊಯನೆಲ್ಲಿ ಕಾ.ನರಸಿಂಹ ಪಿ.ಎಸ್.ರವರು ವಂದನಾರ್ಪಣೆಗೈದರು

ಹನಗನವಾಡಿ ಡಿ. ವೈ. ಎಫ್. ಐ. ಸಭೆ

ಚಿತ್ರದುರ್ಗದ ಹನಗನವಾಡಿಯಲ್ಲಿ 25.11.87 ರಂದು ಡಿ.ವೈ.ಎಫ್.ಐ. ಸಭೆ ಸೇರಲಾಗಿತ್ತು. ಸಭೆಯಲ್ಲಿ ಡಿ.ವೈ ಎಫ್. ಐ. ಕಾರ್ಯದರ್ಶಿಯವರಾದ ಕಾಂ. ಎಫ್. ಎ. ಬಿ. ಹಿರೇಮಠ್ ಹಾಗೂ ಎಸ್.ಎಫ್.ಐ. ಚಿತ್ರದುರ್ಗ ಜಿಲ್ಲಾಸಂಚಾಲಕರಾದಕಾಂ.ಆರ್.ಅಣ್ಣಪ್ಪನವರು ದೇಶದ ಬಲಿಷ್ಠ ಯುವ ಜನಸಂಘಟನೆಯಾದ ಡಿ.ವೈ.ಎಫ್.ಐ.ನ ಧ್ಯೇಯ, ಧೋರಣೆ, ಗುರಿಯನ್ನು ವಿವರಿಸಿದರು.

ತ್ರಿಪುರಾ ಕಾಂಗ್ರೈ ಪಿತೂರಿಗಳಿಗೊಂದು ಸಾಕ್ಷಿ

"ಮೊದಲಿಗೆ ನಿಮಗೆ ನನ್ನ ಶುಭಾಶಯಗಳು. ನಿಮ್ಮ ವ್ಯಕ್ತಿಯೊಡನೆ ನಾನು ತೆಲಿಯಾಮುರಾದ ವರೆಗೆ ಹೋಗಿದ್ದೆ. ಸರ್ಕಾರ ಭದ್ರತಾ ಪಡೆಗಳನ್ನು ಕಳಿಸುವ ಮುಂದಿನ ದಿನಾಂಕಗಳ ಡಾಕ್ಯುಮೆಂಟ್‌ಗಳನ್ನೆಲ್ಲಾ ಆತನಿಗೆ ನೀಡಿದ್ದೇನೆ .... ನೀವು ಕಳಿಸಿದ ನಗದು ಹಣಕ್ಕಾಗಿ ವಂದನೆಗಳು"– ಇದುತ್ರಿಪುರಾ ಯುವ ಕಾಂಗ್ರೆಸ್(ಐ)ನ ಅಧ್ಯಕ್ಷ ಬಿರ್ಜಿತ್ ಸಿನ್ಹಾ ಉಗ್ರಗಾಮಿ ಟಿ.ಎನ್.ವಿ. ಮುಖಂಡ ಬಿಜೋಯ್ ಹ್ರಾಂಖಾಲ್‌ಗೆ ಬರೆದ ಪತ್ರದ ಎರಡು ವಾಕ್ಯಗಳು. ಸಿ.ಪಿ.ಐ.(ಎಂ) ನ ತ್ರಿಪುರಾ ರಾಜ್ಯ ಸಮಿತಿಯ ಮುಖ ಪತ್ರಿಕೆ ದೈನಿಕ "ದೇಶೇರ್ ಕಥಾ" ಈ ಪತ್ರದ ಪೊಟೋಸ್ಟಾಟ್ ನಕಲನ್ನುತನ್ನ ನವಂಬರ್ 11ರ ಸಂಚಿಕೆಯಲ್ಲಿ ಪ್ರಕಟಿಸಿ ಕಾಂಗ್ರೆಸ್ (ಐ) ಉಗ್ರಗಾಮಿಗಳೊಂದಿಗೆ ಶಾಮೀಲಾಗಿ ನಡೆಸುತ್ತಿರುವ ಕುತಂತ್ರಗಳನ್ನು ಬಯಲಿಗೆಳೆದಿದೆ.

ಈ ಪತ್ರದಲ್ಲಿ ತ್ರಿಪುರಾ ಸರ್ಕಾರ ಭದ್ರತಾ ಪಡೆಗಳನ್ನು ಕಳಿಸುವುದರ ಸಂಪೂರ್ಣ ವಿವರಗಳುಳ್ಳ ದಸ್ತಾವೇಜುಗಳನ್ನು ಉಗ್ರಗಾಮಿಗಳಿಗೆ ನೀಡಿರುವುದಲ್ಲದೆ ಮುಂದಿನ ಚುನಾವಣೆಯೊಳಗೆ ಮೂರು ಪೆಟ್ಟಿಗೆಯಷ್ಟು ಬುಲೆಟ್‌ಗಳನ್ನು ಕಳಿಸುವುದಾಗಿಯೂ ಯುವ ಕಾಂಗ್ರೈ ಅಧ್ಯಕ್ಷ ಆಶ್ವಾಸನೆ ನೀಡಿದ್ದಾನೆ. ಇಷ್ಟೇ ಅಲ್ಲ, ಮಣಿಪುರದ ಉಗ್ರಗಾಮಿಗಳಿಗೂ ಕಾಂಗ್ರೈನ ನೆರವಿನ ಸುಳಿವು ಈಪತ್ರದಿಂದ ದೊರೆತಿದೆ.

1983ರಲ್ಲಿ ಕಾಂಗ್ರೈ ಎಂ.ಎಲ್.ಎ. ಕಾಸೀರಾಂ ರಿಯಾಂಗ್ ಈ ಯುವ ಕಾಂಗ್ರೈ ಅಧ್ಯಕ್ಷ ಉಗ್ರಗಾಮಿಗಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ಕಾಂಗ್ರೈ ಹೈಕಮಾಂಡ್‌ಗೆ ಬರೆದಿದ್ದರು. ಆಗ ಆತನ ಬಾಯಿ ಮುಚ್ಚಿಸಲಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು.

ಹೀಗಿದ್ದೂ ಕೇಂದ್ರ ಮಂತ್ರಿ ಚಿದಂಬರಂ ಕಾಂಗ್ರೈಗೂ ಉಗ್ರಗಾಮಿಗಳಿಗೂ ಏನೂ ಸಂಬಂಧವಿಲ್ಲ ಎಂದು ಸಂಸತ್ತಿನಲ್ಲಿ ಅಬ್ಬರಿಸುತ್ತಿರುವುದು, ಅಗರ್ತಲಾದಲ್ಲಿ ಪ್ರಧಾನ ಮಂತ್ರಿಗಳು ಟಿ.ಎನ್.ವಿ. ಉಗ್ರಗಾಮಿಗಳನ್ನು ಹತ್ತಿಕ್ಕುವಲ್ಲಿ ತ್ರಿಪುರಾ ಸರ್ಕಾರ ವಿಫಲವಾಗಿದೆ ಎಂದು ಆಪಾದಿಸಿರುವುದು ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವ ಮಾತುಗಳೆಂದು ಎಲ್ಲರಿಗೂ ಸ್ಪಷ್ಟವಾಗುತ್ತಿದೆ. "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆ ಕೂಡಾ ರಾಜೀವ್ ಗಾಂಧಿಯವರ ಈ ಆಪಾದನೆ ಅವರ ಗೋಸುಂಬೆತನವನ್ನು ತೋರಿಸುತ್ತದೆ ಎಂದು ಸಂಪಾದಕೀಯವೊಂದರಲ್ಲಿ ಟೀಕಿಸಿದೆ.

ಅಮೆರಿಕನ್ ಆಳುವ ವಲಯಗಳ ಕುತಂತ್ರ ಮತ್ತೊಮ್ಮೆ ಬಯಲಿಗೆ !

ಅಮೇರಿಕಾದ ಸೆನೇಟ್ ವಿನಿಯೋಗ ಸಮಿತಿ ಡಿಸೆಂಬರ್ 3 ರಂದು "ವಿದೇಶ ನೆರವು ಶಾಸನ"ಕ್ಕೆ ಒಂದು ತಿದ್ದುಪಡಿ ತಂದು ಭಾರತಕ್ಕೆ ಅವಮಾನ ಮಾಡಿದೆ. ಪಾಕಿಸ್ತಾನದ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮಕ್ಕೆ ಭಾರತವೇ ಕಾರಣವೆಂಬ ವಾದವನ್ನು ಒಪ್ಪಿಕೊಂಡಿರುವ ಸೆನೇಟ್ ಸಮಿತಿ ಭಾರತ ಮತ್ತು ಪಾಕಿಸ್ತಾನ ಪರಮಾಣು ಶಸ್ತ್ರಾಸ್ತ್ರ ತಡೆ ಬಗ್ಗೆ ಒಪ್ಪಂದ ಮಾಡಿಕೊಳ್ಳದಿದ್ದರೆ ಈ ಎರಡು ದೇಶಗಳಿಗೆ ಅಮೇರಿಕಾದ ಉಚ್ಚ ತಂತ್ರಜ್ಞಾನದ ರಫ್ತು ಹಾಗೂ ನೆರವನ್ನು ಪ್ರತಿ ಬಂಧಿಸಬೇಕೆಂದು ಈ ತಿದ್ದುಪಡಿ ಹೇಳುತ್ತದೆ. ಆದರೆ ಪಾಕಿಸ್ತಾನಕ್ಕೆ ಆರು ವರ್ಷಗಳ 4 ಶತ ಕೋಟಿ ಡಾಲರುಗಳ ಮಿಲಿಟರಿ ನೆರವು ಮುಂದುವರಿಸಲು ಅದೇ ಸಮಿತಿ ಒಪ್ಪಿಗೆ ನೀಡಿದೆ !

ಕೆಲವೇ ದಿನಗಳ ಹಿಂದೆಯಷ್ಟೇ ಪ್ರಧಾನಿ ರಾಜೀವ್ ಗಾಂಧಿಯವರು ತಮ್ಮ ಅಮೇರಿಕಾ ಭೇಟಿಯ ನಂತರ ಬಹಳ ಉತ್ಸಾಹದಿಂದ ಮಾತನಾಡಿದ್ದರು. ಪಾಕಿಸ್ತಾನ ಸಣ್ಣ ದೇಶ, ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂಬ ರೇಗನ್‌ರ ಮಾತನ್ನು ಪುನರುಚ್ಚರಿಸಿದ್ದರು. ಅಮೇರಿಕದೊಡನೆ ರಕ್ಷಣಾ ಸಹಕಾರ ಒಪ್ಪಂದದ ಬಗ್ಗೆ ಆನಂದತುಂದಿಲರಾಗಿದ್ದರು. ಆದರೆ ಒಪ್ಪಂದದ ಶರತ್ತುಗಳೇನೆಂದು ಹೇಳಿರಲಿಲ್ಲ (ಐಕ್ಯರಂಗ–ನವಂಬರ್ 15 ನೋಡಿ)ಈಗ ಆ ಒಪ್ಪಂದ ಮಾತ್ರವಲ್ಲ, ಸೂಪರ್ ಕಂಪ್ಯೂಟರ್ ಬಗ್ಗೆ ಒಪ್ಪಂದವೂ ಜ್ಯಾರಿಗೆ ಬರಬೇಕಾದರೆ ಈ ಹೊಸ ತಿದ್ದುಪಡಿಯ ಪ್ರಕಾರ ಅಮೇರಿಕಾ ಹೇಳಿದಂತೆ ಕೇಳಬೇಕಾಗುತ್ತದೆ. ಪರಮಾಣು ಶಕ್ತಿಯ ಶಾಂತಿಯುತ ಪ್ರಯೋಗದಲ್ಲಿ ತೊಡಗಿರುವ ಭಾರತ, ಅಮೇರಿಕಾದ ಶಸ್ತ್ರಾಸ್ತ್ರಗಳಿಂದ ಸಜ್ಜಿತಗೊಳ್ಳುತ್ತಾ ಅದರ ನೆರವಿನಿಂದಲೇ ಪರಮಾಣು ಬಾಂಬು ತಯಾರಿಸುತ್ತಿರುವ "ಸಣ್ಣ ದೇಶ" ದೊಂದಿಗೆ ಅಮೇರಿಕಾಕ್ಕೆ ಒಪ್ಪಿಗೆಯಾಗುವ ಒಪ್ಪಂದ ಮಾಡಿಕೊಳ್ಳಬೇಕು ! ಈ ತಿದ್ದುಪಡಿಯಲ್ಲಿ ರೇಗನ್ ಆಡಳಿತ ಕೈವಾಡವಿದೆಯೆಂದೂ ತಿಳಿದು ಬಂದಿದೆ. ಅಮೇರಿಕಾ "ಗಂಭೀರಸನ್ನಿವೇಶಗಳಲ್ಲಿ ಶಸ್ತ್ರಾಸ್ತ್ರ ಸರಬರಾಜಿಗೆ ಅಡ್ಡಿಯುಂಟು ಮಾಡಿ ದೇಶದ-ಸಾರ್ವಭೌಮತೆಗೆ ಕುತ್ತು ತರುವುದು ಖಂಡಿತ. ಆದ್ದರಿಂದ ಈ ಒಪ್ಪಂದವನ್ನು ವಿರೋಧಿಸಬೇಕು" ಎಂದು ಸಿ. ಪಿ. ಐ. (ಎಂ) ಎಚ್ಚರಿಕೆ ನೀಡಿತ್ತು. ಆ ಒಪ್ಪಂದ ಜ್ಯಾರಿಯಾಗುವ ಮೊದಲೇ ಇದು ನಿಜವಾಗಿದೆ.

ಆದರೂ ನಮ್ಮನ್ನಾಳುವ ಜನ ಎಚ್ಚೆತ್ತುಕೊಳ್ಳುತ್ತಾರೆಯೇ ? ಭಾರತ ಅಮೇರಿಕಾ ಮಾಡಿರುವ ಈ ಅನುಮಾನದ ಬಗ್ಗೆ "ಸ್ನೇಹ ಪೂರ್ಣ ಎಚ್ಚರಿಕೆ" ನೀಡಿದಯಂತೆ ಪ್ರತಿಭಟಿಸಿಲ್ಲ ! ಅಮೇರಿಕಾ ತನ್ನ ಕಾನೂನುಗಳನ್ನೇ ತಾನು ಮುರಿಯುತ್ತಿದೆ ಎಂದು ನಮ್ಮ ರಕ್ಷಣಾ ಮಂತ್ರಿಗಳಿಗೆ ಕಳವಳವಾಗಿದೆ. ಆದರೆ ಅಮೇರಿಕನ್ ಆಳುವ ವಲಯಗಳ ಬಗ್ಗೆ ತಿಳಿದಿರುವವರಿಗಂತೂ ಇದು ಹೊಸ ಸಂಗಾತಿಯೇನಲ್ಲ.

ಅರಬ್‌ಲೀಗನ್ನು ನಿರ್ವೀರ್ಯಗೊಳಿಸುವ ಯತ್ನ

ಅರಬ್‌ಲೀಗ್ ಯೂರೋಪಿನ ಸಾಮ್ರಾಜ್ಯಶಾಹೀ ದೇಶಗಳು ಮತ್ತು ಏಷ್ಯಾ ಹಾಗೂ ಆಫ್ರಿಕಾದ ಅವುಗಳ ಮಾಜೀ ವಸಾಹತುಗಳ ಮಧ್ಯದ ಪ್ರದೇಶದಲ್ಲಿ ಹರಡಿರುವ 18 ಕೋಟಿ ಜನರಿರುವ 22 ದೇಶಗಳ ಒಂದು ಸಂಘಟನೆ. ಇದು ರಾಷ್ಟ್ರೀಯ ಆಂದೋಲನಗಳ ಫಲವಾಗಿ ಆರಂಭವಾದ ಮೊದಲ ಸಂಘಟನೆ—1945 ರ ಮಾರ್ಚ್‌ನಲ್ಲಿ, ಅಲಿಪ್ತ ಆಂದೋಲನ ಹುಟ್ಟುವ ಮೊದಲು. ಅಮೇರಿಕಾದ ಆಳುವ ವಲಯುಗಳು ವಿಶ್ವ ಸಂಸ್ಥೆ, ಅಲಿಪ್ತ–ಆಂದೋಲನ ಆಫ್ರಿಕನ್ ಐಕ್ಯತಾ ಸಂಘಟನೆ ಇತ್ಯಾದಿಸಾಮ್ರಾಜ್ಯಶಾಹಿ-ವಿರೋಧಿ ಸಂಘಟನೆಗಳನ್ನು ಮುರಿಯಲು ಪ್ರಯತ್ನಿಸಿದಂತೆ ಅರಬ್ ಲೀಗ್‌ನ ಐಕ್ಯತೆಯನ್ನೂ ಮುರಿಯಲು ಸರ್ವ ಪ್ರಯತ್ನ ನಡೆಸುತ್ತಾ ಬಂದಿದೆ–ವಿಶೇಷವಾಗಿ, 1982 ರಲ್ಲಿ ಪ್ಯಾಲಿಸ್ಟೀನಿಯಾ ವಿಮೋಚನೆ ಬಗ್ಗೆ ಅದು ಸ್ಪಷ್ಟ ನಿಲುವು ತಳೆದ ಮೇಲೆ.

ಇದೇ ನವಂಬರ್ 7 ರಂದು ಅಮ್ಮಾನ್‌ನಲ್ಲಿ ನಡೆದ ಅರಬ್‌ಲೀಗ್ ಶೃಂಗ ಸಮ್ಮೇಳನದ ಕಲಾಪಗಳನ್ನು ನೋಡಿದರೆ ಸಾಮ್ರಾಜ್ಯಶಾಹಿಗಳಿಗೆ ತಮ್ಮ ಪ್ರಯತ್ನಗಳಲ್ಲಿ ಸಾಕಷ್ಟು ಯಶಸ್ಸು ದೊರೆತಿರುವಂತೆ ಕಾಣುತ್ತಿದೆ. ಜೋರ್ಡಾನ್, ಸೌದಿ ಅರೇಬಿಯಾ, ಕುವೈತ್ ಮೊದಲಾದ ಪ್ರತಿಗಾಮಿ ಅರಬ್ ರಾಜಪ್ರಭುತ್ವಗಳು ಹಾಗೂ ಇರಾನ್‌ನ ಮೂಲಭೂತವಾದೀ ಆಡಳಿತದ ದುಸ್ಸಾಹಸಗಳು ಸಾಮ್ರಾಜ್ಯಶಾಹಿಗಳಿಗೆ ಅರಬ್‌ಲೀಗ್‌ನ ಐಕ್ಯತೆಯಲ್ಲಿ ಬಿರುಕು ತರುವಲ್ಲಿ ನೆರವಾಗಿದೆ. ಆದರೆ ಅರಬ್ ದೇಶಗಳ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯ ಆಂದೋಲನದ ಪರಂಪರೆ ಇನ್ನೂ ಸಾಕಷ್ಟು ಶಕ್ತಿ ಹೊಂದಿರುವುದರಿಂದಾಗಿ ಅರಬ್‌ಲೀಗ್‌ನ ಐಕ್ಯತೆಯನ್ನು ಪೂರ್ಣವಾಗಿ ಮುರಿಯುವುದು ಸಾಮ್ರಾಜ್ಯಶಾಹಿಗಳಿಗೆ ಇನ್ನೂದೂರದ ಕನಸಾಗೇ ಉಳಿದಿದೆ. ○

ಪಾಲಿಟ್ ಬ್ಯೂರೋ ಹೇಳಿಕೆ

ತ್ರಿಪುರಾ ಚುನಾವಣೆಗಳ ಮುಂದೂಡಿಕೆ ಯತ್ನ

ತ್ರಿಪುರಾದ ಅಸೆಂಬ್ಲಿ ಚುನಾವಣೆಗಳನ್ನು ಜನವರಿ ತಿಂಗಳಿಗೆ ಮುಂದೂಡುವ ಚುನಾವಣಾ ಆಯೋಗದ ಪ್ರಯತ್ನಗಳ ಬಗ್ಗೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಪ್ರತಿಭಟಿಸಿದೆ. ಮೇಘಾಲಯದ ಚುನಾವಣೆಯೊಂದಿಗೆ ನಡೆಸಲು ಹೀಗೆ ಮಾಡಲಾಗಿದೆಎಂಬ ಆಯೋಗದ ವಾದ ಕೇವಲ ನೆವ. ಡಿಸೆಂಬರ್ 27ರಂದು ಚುನಾವಣೆ ನಡೆಸಲು ಒಪ್ಪಿಕೊಂಡಿದ್ದ ಆಯೋಗದ ಈಗಿನ ಪ್ರಯತ್ನ ಕಾರ್ಯಾಂಗದೆದುರು ತಲೆ ಬಗ್ಗಿಸಿ ಸಂವಿಧಾನ ದತ್ತವಾದ ಆಯೋಗದ ಸ್ವಾತಂತ್ರ್ಯವನ್ನು ಬುಡಮೇಲು ಮಾಡಿದಂತೆ ಎಂದು ಪಾಲಿಟ್‌ಬ್ಯೂರೋ ಖಂಡಿಸಿ ಕೇಂದ್ರ ಸರ್ಕಾರದ ಆದೇಶಗಳಿಗೆ ಮಣಿಯಬಾರದೆಂದು ಆಯೋಗವನ್ನು ಒತ್ತಾಯಿಸಿದೆ.

ಡಾ. ಅಂಬೇಡ್ಕರ್ ಕೃತಿ

ಡಾ. ಅಂಬೇಡ್ಕರ್‌ರ ಪುಸ್ತಕದ ಕೆಲವು ಅಂಶಗಳನ್ನು ಕೈಬಿಟ್ಟು ಮಹಾರಾಷ್ಟ್ರ ಸರ್ಕಾರ ಕಂದಾಚಾರಿಗಳನ್ನು ಸಂತುಷ್ಟಗೊಳಿಸಲು ಅವರಿಗೆ ಶರಣಾಗಿರುವುದು ನಾಚಿಕೆಗೇಡು ಎಂದು ಪಾಲಿಟ್‌ಬ್ಯೂರೋ ಖಂಡಿಸಿದೆ. ಡಾ.ಅಂಬೇಡ್ಕರ್ ಆಧುನಿಕ ಭಾರತದ ನಿರ್ಮಾಣದಲ್ಲಿ ಮಹಾನ್ ಕೊಡುಗೆ ನೀಡಿದ್ದಾರೆ. ಅವರ ಕೃತಿಯನ್ನು ಪೂರ್ಣವಾಗಿ ಮೂಲ ರೂಪದಲ್ಲೇ ಪ್ರಕಟಿಸಬೇಕು ಎಂದು ದೇಶಾದ್ಯಂತ ಎದ್ದಿರುವ ಒತ್ತಾಯಕ್ಕೆ ದನಿ ಗೂಡಿಸಿರುವ ಪಾಲಿಟ್‌ಬ್ಯೂರೋ ಆಳುವ ಪಕ್ಷ ಹಾಗೂ ಮಹಾರಾಷ್ಟ್ರ ರಾಜ್ಯ ಸರ್ಕಾರ ಮೂಢನಂಬಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದರ ವಿರುದ್ಧ ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳುಒಟ್ಟಾಗಿ ಪ್ರತಿಭಟಿಸಬೇಕೆಂದು ಕರೆ ನೀಡಿದೆ.

ಪಶ್ಚಿಮ ಬಂಗಾಳದ ಕಾಂಗ್ರೈ ಎಂ. ಪಿ.ಗಳೂ ಕೇಂದ್ರದ ವಿರುದ್ಧ

ಕಲ್ಕತ್ತಾದಲ್ಲಿ ನೂರೈವತ್ತು ವರ್ಷಗಳಿಂದಿರುವ ಈಗ ಮುಚ್ಚಿರುವಕೇಂದ್ರ ಸರ್ಕಾರದ ಲೇಖನ ಸಾಮಗ್ರಿಗಳ ಕಚೇರಿಯ ಸಮ್ಮುಖಎಡರಂಗದ ಆಶ್ರಯದಲ್ಲಿ ಡಿಸೆಂಬರ್ 8ರಿಂದ ಕೇಂದ್ರ ಸರ್ಕಾರದ ಬೇಜವಾಬ್ದಾರಿ ಹಾಗೂ ರಾಜ್ಯ–ವಿರೋಧಿ ಧೋರಣೆಗಳ ವಿರುದ್ಧ ಚಳುವಳಿ ಆರಂಭವಾಗಲಿದೆ. ಈ ಚಳುವಳಿಯಲ್ಲಿ ಮಾಜಿ ಕೇಂದ್ರ ಮಂತ್ರಿ ಅಶೋಕ ಸೆನ್ ಹಾಗೂ ಇತರ ಕಾಂಗ್ರೈ ಎಂ.ಪಿ.ಗಳೂ ಭಾಗವಹಿಸಲು ನಿರ್ಧರಿಸಿದ್ದಾರೆಂದು ಈಗ ಸುದ್ದಿ ಬಂದಿದೆ. ಇವರು ನವೆಂಬರ್ 10 ರಂದು ಸಭೆ ಸೇರಿ ಈ ಬಗ್ಗೆ ರಾಜೀವ ಗಾಂಧಿಯವರಿಗೆ ಬರೆದ ಮನವಿಪತ್ರಕ್ಕೆ ಉತ್ತರ ಬರದ್ದರಿಂದಾಗಿ ಈ ನಿರ್ಧಾರ ಕೈಗೊಂಡರಂತೆ. ರಾಜ್ಯದ ಕೈಗಾರಿಕೆಗಳನ್ನು ಒಂದೊಂದಾಗಿ ಮುಚ್ಚುತ್ತಿರುವ ಅಥವಾ ಸ್ಥಳಾಂತರಿಸುವ ಯೋಚನೆ ಮಾಡುತ್ತಿರುವ ಕೇಂದ್ರದ ಬೇಜವಾಬ್ದಾರಿ ನೀತಿಯನ್ನು ತಾವು ಕೈಕಟ್ಟಿ ನೋಡುತ್ತಾ ಕೂತಿರಲು ಸಾಧ್ಯವಿಲ್ಲವೆಂದು ಎಲ್ಲಾ ಕಾಂಗ್ರೈ ಸಂಸತ್ ಸದಸ್ಯರ ಪರವಾಗಿ ಅಶೋಕ ಸೇನ್ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

67 ವರ್ಷಗಳ ನಂತರ ಮಾನ್ಯತೆ

ಅಕ್ಟೋಬರ್ ಕ್ರಾಂತಿಯ "ವಿಶ್ವವನ್ನೇ ನಡುಗಿಸಿದ ಹತ್ತು ದಿನಗಳ" ಚಾರಿತ್ರಿಕ ಕೃತಿ ನೀಡಿದ ಅಮೇರಿಕನ್ ಪತ್ರಕರ್ತ ಜಾನ್‌ರೀಡ್‌ರವರಿಗೆ ಅವರ ಮರಣದ 67 ವರ್ಷಗಳ ನಂತರವಾದರೂ ಅವರ ಹುಟ್ಟೂರಾದ ಪೋರ್ಟ್‌ಲಂಡ್‌ನ ಜನ ಮಾನ್ಯತೆ ನೀಡಿದ್ದಾರೆ. ಇದೇ ಅಕ್ಟೋಬರ್ 22 ರಂದು ರೀಡ್‌ರವರು ಹುಟ್ಟಿ ನೂರು ವರ್ಷ ತುಂಬಿದ ದಿನವನ್ನು "ಜಾನ್ ರೀಡ್ ದಿನ"ವಾಗಿ ಪೋರ್ಟ್‌ಲಂಡ್‌ನ ಜನ ಆಚರಿಸಿದ್ದಾರೆ. "ತನ್ನ 32 ವರ್ಷಗಳ ಅಲ್ಪಾವಧಿಯಲ್ಲೇ ಶಾಂತಿ ಹಾಗೂ ಅಂತರಾಷ್ಟ್ರೀಯ ಅರಿವಿಗಾಗಿ ಜಾಗತಿಕ ರಂಗದಲ್ಲಿ ಬೆಳಗಿದ ನಮ್ಮೂರಿನ ಈ ಪುತ್ರನೊಬ್ಬನ ಗೌರವಾರ್ಥ" ದಿನಾಚರಣೆ ನಡೆಸಲು ಪೋರ್ಟ್‌ಲಂಡ್‌ನ ಮೇಯರ್ ಕ್ಲಾರ್ಕ್ ಹೊರಡಿಸಿದ ಘೋಷಣೆ ಕರೆನೀಡಿತ್ತು.

ಅಕ್ಟೋಬರ್ ಕ್ರಾಂತಿಯನ್ನು ಕಣ್ಣಾರೆ ಕಂಡಿದ್ದ ಜಾನ್ ರೀಡ್ ಕ್ರಮೇಣ ಬೋಲ್ಶೆವಿಸಂನ ಕಟ್ಟಾ ಬೆಂಬಲಿಗರಾದಾಗ ಅಮೇರಿಕನ್ ಸರ್ಕಾರ ಅವರ ಮೇಲೆ ಪ್ರತಿ ಬಂಧ ಹೇರಿತ್ತು. ಈಗಲೂ ಆಳುವ ವಲಯಗಳಲ್ಲಿ ಅವರ ಬಗ್ಗೆ ಹೃದಯ ಪರಿವರ್ತನೆಯೇನೂ ಕಂಡು ಬಂದಿಲ್ಲ.

REG No. BGW-148 MAG (2) PRB DECR 319/ 78-79

ರಾಜೀವ್ ಸರ್ಕಾರದ ರಾಜೀನಾಮೆಗಾಗಿ ಹೋರಾಟ ಮುಂದುವರಿಕೆ

(1 ನೇ ಪುಟದಿಂದ)

ಕೇವಲ ವಿಶ್ವಾಸ ಕಳಕೊಂಡ ರಾಜೀವ್ ಸರ್ಕಾರವನ್ನು ಕೆಳಗಿಳಿಸುವುದು ಮಾತ್ರವಲ್ಲ, ಸದ್ಯದ ವ್ಯವಸ್ಥೆಗೊಂದು ಪರ್ಯಾಯ ರಾಜಕೀಯ ವ್ಯವಸ್ಥೆಯ ನಿರ್ಮಾಣ ಮಾಡುವುದೂ ಇದರ ಉದ್ದೇಶ ಎಡರಂಗ ಈ ಎಲ್ಲಾ ಪ್ರಜಾಪ್ರಭುತ್ವವಾದೀ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಮುಖಂಡತ್ವ ಕೊಡುತ್ತದೆ ಎಂದರು. ಬಿ.ಟಿ.ಆರ್, ಇಂದ್ರಜಿತ್ ಗುಪ್ತ, ಚಿತ್ತ ಬಸು, ಹೋಮಿದಾಜಿ ಹಾಗೂ ಇತರ ಮುಖಂಡರೂ ಈ ಹೊಸ ಜಾಗೃತಿಯ ರಾಜಕೀಯ ಮಹತ್ವದ ಬಗ್ಗೆ ಮುಂದಿನ ಹೆಜ್ಜೆಗಳ ಬಗ್ಗೆ ಮಾತನಾಡಿದರು.

ಕೇಂದ್ರಿಯ ಆಂದೋಲನಸಮಿತಿಯ ಸಂಯೋಜಕರಲ್ಲೊಬ್ಬರಾದ ಸುರ್ಜಿತ್ ರವರು ರ್ಯಾಲಿಯ ನಿರ್ಣಯವನ್ನು ಮಂಡಿಸಿದರು. ದೇಶಾದ್ಯಂತ ನಡೆದ ಪ್ರಕ್ಷೋಭೆಯ 13 ಬೇಡಿಕೆಗಳನ್ನು ಬೆಂಬಲಿಸಿದ ಈ ಚಾರಿತ್ರಿಕ ರ್ಯಾಲಿ ರಾಜೀವಗಾಂಧಿ ಸರ್ಕಾರದ ರಾಜೀನಾಮೆ ಹಾಗೂ ಹೊಸ ಚುನಾವಣೆಗಳು ನಡೆಯುವಂತಾಗುವವರೆಗೆ ಹೋರಾಟ ಮುಂದುವರಿಸಲು ನಿರ್ಧರಿಸಿತು. ಈ ಉದ್ದೇಶ ಸಾಧನೆಯ ಮೊದಲ ಹೆಜ್ಜೆಯಾಗಿ ಒಂದು ದಿನ "ಭಾರತ ಬಂದ್" ನಡೆಸಲು ತೀರ್ಮಾನಿಸಲಾಯಿತು. ದಿನಾಂಕವನ್ನು ಇತರ ಜತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳೊಡನೆ ಸಮಾಲೋಚನೆಯ ನಂತರ ನಿರ್ಧರಿಸಲು ಕೇಂದ್ರಿಯ ಆಂದೋಲನ ಸಮಿತಿಗೆ ಅಧಿಕಾರ ನೀಡಲಾಯಿತು. ಇದಲ್ಲದೆ ಇತರ ಕಾರ್ಯಕ್ರಮಗಳನ್ನು ರೂಪಿಸಲು ಸಮಿತಿಗೆ ಅಧಿಕಾರ ನೀಡಲಾಯಿತು. ಜನವರಿ 30 ರಂದು ರಾಷ್ಟ್ರವ್ಯಾಪೀ ಸಾಮೂಹಿಕ ಆಂದೋಲನವನ್ನು ಬೆಂಬಲಿಸಲು ಪಣ ತೊಡುವ ದಿನವಾಗಿ ಆಚರಿಸಲು ನಿರ್ಧರಿಸಲಾಯಿತು. ಅಧಿವೇಶನದಲ್ಲಿದ್ದ ಸಂಸತ್ತಿನಲ್ಲೂ ಈ ಚಾರಿತ್ರಿಕ ರ್ಯಾಲಿ ಪ್ರತಿಧ್ವನಿಗೊಂಡಿತು. ಎಡ ಪಕ್ಷಗಳ ಸದಸ್ಯರನ್ನು ಜಾತ್ಯತೀತ ವಿರೋಧ ಪಕ್ಷಗಳ ಸದಸ್ಯರೂ ಬೆಂಬಲಿಸಿ ಒಟ್ಟಾಗಿ ಸಭಾತ್ಯಾಗ ನಡೆಯಿತು.

ಈ ಚಾರಿತ್ರಿಕ ರ್ಯಾಲಿ ನಡೆಯುವ ಒಂದು ವಾರದ ಹಿಂದೆ ಸುರ್ಜಿತ್ "ಪೀಪಲ್ಸ್ ಡೆಮಾಕ್ರಸಿ"ಯಲ್ಲಿ ಬರೆದ ಲೇಖನದಲ್ಲಿ ಇದು ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಅಭೂತಪೂರ್ವ ದಾಖಲೆಯಾಗುತ್ತದೆ, ವಿವಿಧ ಜನ ವಿಭಾಗಗಳನ್ನು ಒಂದುಗೂಡಿಸುವ ಸ್ಪಷ್ಟ ಘೋಷಣೆಗಳು ಇನ್ನೂ ಚಂಚಲವಾಗಿರುವ ಶಕ್ತಿಗಳು ಈಗ ಒಂದೆಡೆ ಕೋಮುವಾದಿ ಮತ್ತು ವಿಚ್ಛಿದ್ರಕಾರೀ ಶಕ್ತಿಗಳು ಹಾಗೂ ಇನ್ನೊಂದೆ ಡೆಎಡ ಶಕ್ತಿಗಳು–ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಲೇ ಬೇಕಾಗುತ್ತದೆ ಎಂದು ಬರೆದಿದ್ದರು. ಮುಂದುವರೆದು ಕಾಂಗ್ರೆಸ್ಸಿನ ಒಳಗಾಗಲಿ ಅಥವಾ ಹೊರಗಾಗಲಿ ನಡೆಯುವ ಯಾವುದೇ ಹೋರಾಟದಲ್ಲಿ ಕಾಂಗ್ರೆಸ್ ಸೋಲಬೇಕಾದರೆ ಅಂತಹ ಹೋರಾಟವನ್ನು ಎಡ ನಿಲುವಿನಿಂದ ನಡೆಸದೆ ಅನ್ಯಥಾ ಸಾಧ್ಯವಿಲ್ಲ ಎಂದು ನಮ್ಮ ಸ್ವಾತಂತ್ರ್ಯಾನಂತರದ ಇತಿಹಾಸ ತೋರಿಸಿಕೊಟ್ಟಿದೆ ಎಂದು ಕಾಂ.ಸುರ್ಜಿತ್ ಹೇಳುತ್ತಾರೆ. ಒಂದು ತಿಂಗಳ ದೇಶವ್ಯಾಪಿ ಪ್ರಕ್ಷೋಭೆ ಹಾಗೂ ಡಿಸೆಂಬರ್ 9ರ ಚಾರಿತ್ರಿಕ ರ್ಯಾಲಿ ಅವರ ವಿಶ್ಲೇಷಣೆಗೊಂದು ಜೀವಂತ ಸಾಕ್ಷಿ.

ರ್ಯಾಲಿ ನೀಡಿದ ಸ್ಫೂರ್ತಿ

ರ್ಯಾಲಿಯ ಗಾತ್ರದಷ್ಟೇ ಮುಖ್ಯವಾದದ್ದು ಈ ಮತ ಪ್ರದರ್ಶನದ ಗುಣಮಟ್ಟ............. ಅತ್ಯಂತ ಪ್ರಭಾವಶಾಲಿಯಾದುದೆಂದರೆರ್ಯಾಲಿಗೆ ಬರುವಾಗ ತೀರಿಕೊಂಡ ಒಬ್ಬ ವ್ಯಕ್ತಿಯ ಗೌರವಾರ್ಥ ಒಂದು ನಿಮಿಷದ ಮೌನ ಆಚರಿಸಲು ವೇದಿಕೆಯಿಂದ ನೀಡಿದ ಕರೆಗೆ ಸಭೆಯ ಪ್ರತಿಕ್ರಿಯೆ. ಈ ಕರೆಯನ್ನು ನೀಡಿದ ಸಂಗತಿ ಮತ್ತು ಅದನ್ನು ಇಷ್ಟೊಂದು ಶಿಸ್ತಿನಿಂದ ಪಾಲಿಸಲಾಯಿತು ಎಂಬುದು ಈ ರ್ಯಾಲಿ ಇತರ ದೊಡ್ಡ ಜಂಬೂರಿಗಳಿಗಿಂತ ತೀರಾ ಭಿನ್ನವಾದುದು ಎಂದು ಸ್ಪಷ್ಟಗೊಳಿಸಿತು.

– 'ಹಿಂದೂ' ಪತ್ರಿಕೆಯ ವಿಶೇಷ ವರದಿಗಾರ

ಮತ್ತೊಂದು ಸಾಲಮೇಳ

(1ನೇ ಪುಟದಿಂದ)

ಕ್ರಮ. ಅಖಿಲ ಭಾರತ ಕಿಸಾನ್ ಸಭಾ ಮೊದಲಿನಿಂದಲೂ ಸಾಲದ ನಿಯಮಾವಳಿಗಳನ್ನು ಸರಳಗೊಳಿಸಿ ಬಡವರಿಗೆ ಸಾಲ ಸಿಗುವಂತಾಗಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಈ ಕ್ರಮ ಮಾತ್ರವೇ ಖಾಸಗಿ ಬಡ್ಡಿ ಸಾಹುಕಾರರಿಂದ, ಗಿರವಿ ಅಂಗಡಿಯವರ ಮುಷ್ಠಿಯಿಂದ, ಅವರು ತಿಂಗಳಿಗೆ ನೂರಕ್ಕೆ 3 ರೂ ನಿಂದ 5 ರೂ. ವರೆಗೆ ಹಾಕುವ ಬಡ್ಡಿಯಿಂದ ಬಡ ಜನರನ್ನು ಮುಕ್ತ ಮಾಡಬಲ್ಲದು. ದೇಶದಲ್ಲಿ ಖಾಸಗಿ ಸಾಲಗಳ ಹಾವಳಿ ತಪ್ಪಿಸಿ ಸಾಂಸ್ಥಿಕ ಸಾಲಗಳ ಪದ್ಧತಿಯೊಳಕ್ಕೆ ಅವರನ್ನು ಸೆಳೆದುಕೊಳ್ಳಬಲ್ಲುದುಆದರೆಸಾಲಮೇಳಗಳ ಹೆಸರಿನಲ್ಲಿ ನಡೆಯುತ್ತಿರುವುದಾದರೂ ಏನು? ಬಡವರಿಗೆ ಅಗತ್ಯವಾದ ಸಾಲವನ್ನು ದೊರಕಿಸುವ ರೀತಿ ಹೇಗೆ?

ಮೊತ್ತ ಮೊದಲಾಗಿ ಸಾಲಮೇಳಗಳು ಕೇಂದ್ರ ಸರಕಾರದ IRDP ಮೊದಲಾದ ಯಾವುದೇ ಯೋಜನೆಗೆ ಒಳಪಟ್ಟವುಗಳಲ್ಲ ಸರಕಾರ ಸಹಾಯಧನ ಈ ಬಹಳಷ್ಟು ಸಾಲಗಳ ಭಾಗವಾಗಿರುವುದಿಲ್ಲ. ಇದನ್ನು ಎಲ್ಲಿ, ಯಾವಾಗ ಏರ್ಪಡಿಸಬೇಕುಎಂಬುದಕ್ಕೆ ಯಾವುದೇ ನಿಶ್ಚಿತ ವಿಧಿನಿಯಮಗಳಿಲ್ಲ. ಜನಾರ್ಧನಪೂಜಾರಿಯವರಿಗೆ ಮನಸ್ಸಿಗೆ ಬಂದಕಡೆ, ಮನಸ್ಸಿಗೆ ಬಂದ ಸಮಯದಲ್ಲಿ ಏರ್ಪಾಡಾಗುವಂತಹವು. ಇವು ಹೆಚ್ಚಾಗಿ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಚುನಾವಣೆ ಮೊದಲಾದ ಪ್ರಮುಖ ರಾಜಕೀಯ ಘಟನೆಗಳಿಗೆ ಮೊದಲು ಕಾಂಗ್ರೆಪಕ್ಷಕ್ಕೆ ಜನರನ್ನು ಸೆಳೆಯಲು ಮಾತ್ರ ಸೃಷ್ಠಿಯಾಗುವಂತಹವು.

ತ್ರಿಪುರಾದಲ್ಲಿ ರಾಜ್ಯ ಚುನಾವಣೆಗಳಿಗೆ ಮೊದಲು, ಕರ್ನಾಟದಲ್ಲಿ ಇನ್ನೇನು ನಗರ ಸಭಾ ಚುನಾವಣೆಗಳು ನಡೆಯಬೇಕು ಎಂದಾಗ ನಡೆಯುವಂತಹವು.

ಸಾಮಾನ್ಯವಾಗಿ ಕೇಂದ್ರದ ಎಲ್ಲಾ ಯೋಜನೆಗಳು ರಾಜ್ಯ ಸರ್ಕಾರದ ಮೂಲಕಕಾರ್ಯಗತವಾಗುತ್ತವೆ. ಪ್ರಜಾಸತ್ತೆಯೊಂದರ ಮೂಲಭೂತ ಅಗತ್ಯವೆಂದರೆ ಇಂತಹ ಎಲ್ಲಾ ಕಾರ್ಯಕ್ರಮಗಳೂ ಪೂರ್ಣವಾಗಿ ಪ್ರಜಾಸತ್ತಾತ್ಮಕವಾಗಿಯೇ, ಚುನಾಯಿತ ಸಂಸ್ಥೆಗಳ ಮೂಲಕ ಕಾರ್ಯಗತವಾಗಬೇಕು.ಪ್ರಜಾಸತ್ತೆಯನ್ನು ಗ್ರಾಮ ಮಟ್ಟದವರೆಗೆ ವಿಸ್ತರಿಸಲು ಅಡಿಪಾಯವಾಗಬೇಕು. ಪ.ಬಂಗಾಲ, ತ್ರಿಪುರಾಗಳಲ್ಲಿ ಮಾತ್ರ ಕಟ್ಟುನಿಟ್ಟಾಗಿ ಇಂತಹ ಎಲ್ಲಾ ಯೋಜನೆಗಳನ್ನು ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಸಮಿತಿ, ನಗರ ಸಭೆಗಳ ಮೂಲಕ. ಅವರು ಗುರುತಿಸುವ ಫಲಾನುಭವಿಗಳಿಗೆ ಮಾತ್ರ ಕೊಡಲಾಗುತ್ತದೆ. ಈ ಮೂಲಕ ಜನರ ತೀರ್ಮಾನಕ್ಕೆ ಬೆಲೆ ದೊರಕುತ್ತದೆ.

ಅದೇ ಸಮಯದಲ್ಲಿ ಜನತಾಪಕ್ಷ ಒತ್ತಾಯಪಡಿಸಿದ್ದೇನು? ಸರಿಯಾದ ರೀತಿಯಲ್ಲಿ ಚುನಾಯಿತ ಸಂಸ್ಥೆಗಳ ಮೂಲಕ ಈ ಸಾಲ ವಿತರಣೆಯಾಗಬೇಕು ಎಂದಲ್ಲ. ನಮಗೆ ಅರ್ಧ ಕೊಡಿ ನೀವು ಅರ್ಧತೆಗೆದುಕೊಳ್ಳಿ ಇಬ್ಬರೂ ಅಂಚಿಕೊಳ್ಳೋಣ ಎನ್ನುವ ನೀತಿ. ಇದು ಕೂಡ ಖಂಡನೀಯ. ಚುನಾಯಿತ ಸಂಸ್ಥೆಗಳ ಮೂಲಕ ಸಾಮಾನ್ಯ ಜನತೆ ಯಾರಲ್ಲಿ ನಂಬಿಕೆಯಿಟ್ಟು ಆಯ್ಕೆ ಮಾಡಿದ್ದಾರೋ ಅವರ ಮೂಲಕವೇ ಈ ಎಲ್ಲಾ ಯೋಜನೆಗಳೂ ಜಾರಿಯಾಗಬೇಕು ಎಂಬುದು ಪ್ರಜಾಸತ್ತೆಯಲ್ಲಿ ನಂಬಿಕೆಯಿರುವವರೆಲ್ಲರ ಒತ್ತಾಯವಾಗಬೇಕು. ಸಾಲಮೇಳಗಳಲ್ಲಿ ನಿರಂತರವಾಗಿ ಪ್ರತಿದಿನ ಬ್ಯಾಂಕಿಂಗ್ ವ್ಯವಸ್ಥೆಯೊಳಕ್ಕೆ ಬಡವರನ್ನು ಸೆಳೆದುಕೊಳ್ಳುವ ಸರಳೀಕರಣ ಬೇಕು ಎಂಬುದು ನಮ್ಮ ಒತ್ತಾಯವಾಗಬೇಕು.

–ಜಿ. ಎನ್. ನಾಗರಾಜ್

ಬಾಂಗ್ಲಾ ದೇಶದಲ್ಲಿ ತುರ್ತುಪರಿಸ್ಥಿತಿ ಪಿ. ಬಿ. ಖಂಡನೆ

ಸಿ. ಪಿ. ಐ. (ಎಂ) ನ ಪಾಲಿಟ್ ಬ್ಯೂರೋ ನವಂಬರ್ 28 ರಂದು ನೀಡಿದ ಒಂದು ಹೇಳಿಕೆಯಲ್ಲಿ ಬಾಂಗ್ಲಾ ದೇಶ್ ಮೇಲೆ ತುರ್ತು ಪರಿಸ್ಥಿತಿ ಹೇರಿರುವುದನ್ನು ಬಲವಾಗಿ ಖಂಡಿಸಿದೆ. ಮಿಲಿಟರಿ ಆಳರಸ ಬಾಂಗ್ಲಾ ದೇಶ್ ಜನತೆಯ ಹೆಚ್ಚುತ್ತಿರುವ ವಿರೋಧವನ್ನು ಎದುರಿಸಿ ತನ್ನ ಆಳ್ವಿಕೆಯನ್ನು ಮುಂದುವರೆಸಲಾಗದೆ ಈ ತುರ್ತು ಪರಿಸ್ಥಿತಿಯನ್ನು ಹೇರಿದ್ದಾನೆ, ಪ್ರಮುಖ ನಗರಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ, ಕೈಗೆ ಸಿಕ್ಕ ಎಲ್ಲಾ ದಬ್ಬಾಳಿಕೆ ಕ್ರಮಗಳನ್ನು ಚಲಾಯಿಸಲಾಗುತ್ತಿದೆ.

ಮಿಲಿಟರಿ ಆಳ್ವಿಕೆಯ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುತ್ತಿರುವ ಬಾಂಗ್ಲಾ ದೇಶ ಜನತೆಯ ಹೋರಾಟಕ್ಕೆ ತನ್ನ ಸಂಪೂರ್ಣ ಸೌಹಾರ್ದತೆಯಿದೆಯೆಂದು ಪಾಲಿಟ್‌ಬ್ಯೂರೋ ಹೇಳಿದೆ.

ಎಲ್ಲಾ ಜನ ವಿಭಾಗಗಳು, ಕಾರ್ಮಿಕರು, ರೈತರು, ಬುದ್ಧಿಜೀವಿಗಳು, ಕಸಬುದಾರರು ಇತ್ಯಾದಿ ಎಲ್ಲರೂ ಒಗ್ಗಟ್ಟಿನಿಂದ ಭಯೋತ್ಪಾದಕ ಆಡಳಿತ ಹಾಗೂ ತುರ್ತು ಪರಿಸ್ಥಿತಿ ಹೇರಿಕೆಗೆ ಸವಾಲೊಡ್ಡಲು ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿದಿದ್ದಾರೆ ಎಂಬುದರ ಬಗ್ಗೆ ಪಾಲಿಟ್ ಬ್ಯೂರೋ ತನ್ನ ಹೇಳಿಕೆಯಲ್ಲಿ ತೃಪ್ತಿ ವ್ಯಕ್ತಪಡಿಸಿದೆ.

ತುರ್ತು ಪರಿಸ್ಥಿತ ಮತ್ತು ಇತರ ದಬ್ಬಾಳಿಕೆಗಳನ್ನು ತಕ್ಷಣ ನಿಲ್ಲಿಸಬೇಕು, ಬಂಧಿತರನ್ನು ಬಿಡುಗಡೆಗೊಳಿಸಬೇಕು ಹಾಗೂ ಮಿಲಿಟರಿ ಆಳ್ವಿಕೆಯನ್ನು ಕೊನೆಗೊಳಿಸಿ ಪ್ರಜಾಪ್ರಭುತ್ವದ ಮರು ಸ್ಥಾಪನೆಯಾಗಬೇಕೆಂಬ ಬಾಂಗ್ಲಾ ದೇಶ್ ಜನತೆಯ ಒಕ್ಕೊರಲ ಇಚ್ಛೆಯನ್ನು ತಕ್ಷಣ ಸ್ವೀಕರಿಸಬೇಕೆಂದು ಪಾಲಿಟ್‌ಬ್ಯೂರೋ ಹೇಳಿಕೆಯಲ್ಲಿ ಒತ್ತಾಯಿಸಲಾಗಿದೆ.

(1ನೇ ಪುಟದಿಂದ)

ದ ಸ್ವಾಗತ ಸಿಕ್ಕಿದೆ. 14 ವರ್ಷಗಳ ನಂತರ ಸೋವಿಯತ್ ನಾಯಕನೊಬ್ಬ ಅಮೇರಿಕಕ್ಕೆ ಭೇಟಿ ನೀಡಿದ್ದು ಒಪ್ಪಂದಕ್ಕೆ ಸಹಿ ಹಾಕಲು ಆಗಮಿಸಿದ ಗೊರ್ಬಚೇವ್ ಅಮೇರಿಕದ ಜನತೆಯ ಮನ ಗೆದ್ದಿದ್ದಾರೆ. ಒಪ್ಪಂದ ಸಹಿ ಹಾಕಿದ ಮೇಲೆ ಸಹ ಅಮೇರಿಕ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಒಪ್ಪಂದದಿಂದ ಯಾರಿಗೆ ಹೆಚ್ಚು "ಲಾಭ" ಇದರಿಂದ ಯಾರು "ಗೆದ್ದವರು" ಎಂಬ ದಡ್ಡ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಇದಕ್ಕೆ ಗೊರ್ಬಚೇವ್ ಉತ್ತರ ನೀಡಿದ್ದಾರೆ. "ವ್ಯವಹಾರ ಪ್ರಜ್ಞೆ ಗೆದ್ದಿದೆ. ಬುದ್ಧಿ ಸ್ಥಿಮಿತತೆ ಗೆದ್ದಿದೆ. ನಮ್ಮೆರಡೂ ಮಹಾಶಕ್ತಿಗಳೂ ಮತ್ತು ಉಳಿದೆಲ್ಲಾ ವಿಶ್ವ ಜನತೆಗೂ ನಮ್ಮ ಮಕ್ಕಳು, ಮೊಮ್ಮಕ್ಕಳು ಮರಿ ಮಕ್ಕಳೂ ಅವರ ಸಂತತಿ ನಾಶದ ಅಸ್ತ್ರಗಳ ಮೇಲೆ ಸಂಪನ್ಮೂಲ ವ್ಯರ್ಥ ಮಾಡದೆ ಯಾವುದೇ ಪ್ರಾಣಭಯವಿಲ್ಲದೆ ಜೀವನ ನಡೆಸುವತ್ತ ಮುಂದುವರಿಯಲು ಅವಕಾಶ ಮಾಡಿಕೊಟ್ಟಿದೆ. ಸರ್ವನಾಶದ ಮಾರ್ಗದಿಂದ ತಪ್ಪಿಸಿದೆ."

ಈ ಒಪ್ಪಂದವನ್ನು ಹಲವರು ಸ್ವಾಗತಿಸಿದ್ದರೂ ರೇಗನ್, ಗೊರ್ಬಚೇವ್‌ರಿಬ್ಬರೂ ಸಮನಾದ ಪಾತ್ರವಹಿಸಿದ್ದಾರೆ. ಎನ್ನುವರ್ಥದಲ್ಲಿ ಮಾತನಾಡಿದ್ದಾರೆ. ಗೊರ್ಬಚೇವ್‌ರು ಅಧಿಕಾರಕ್ಕೆ ಬಂದಾಗಿನಿಂದ ಗಣೆದರಿಕೊಂಡಿರುವ 'ಆಕ್ರಾಮಕ' ಶಾಂತಿ ಯಾತ್ರೆ ಮೂಲಕ ಈ ಒಪ್ಪಂದ ಆಗುವಲ್ಲಿ ದೊಡ್ಡ ಪಾತ್ರವಹಿಸಿದ್ದಾರೆ ಎಂದು ಯಾವುದೇ ನಿಷ್ಪಕ್ಷಪಾತ ವೀಕ್ಷಕರು ಒಪ್ಪಲೇಬೇಕಾದ್ದು. ವಿಶ್ವ ಶಾಂತಿಯ ಮಹಾನ್ ಗುರಿಯ ದೃಷ್ಟಿಯಿಂದ ಗೊರ್ಬಚೇವ್ ತೋರಿಸಿದ ಭಾರಿ ಜಾಣ್ಮೆ, ಮುತ್ಸದಿತನ ರೇಗನ್‌ರಂತಹ ಯುದ್ಧಕೋರ ಸಹ ಈ ಒಪ್ಪಂದದಿಂದ ನುಣುಚಿ ಕೊಳದಂತೆ ತಡೆಯಿತು. ತಾರಾ ಸಮರ ಮತ್ತಿತರ ಸೂಕ್ಷ್ಮ ವಿಷಯಗಳನು ಪ್ರತ್ಯೇಕವಾಗಿ ಚರ್ಚಿಸಲು ಒಪ್ಪಿದ್ದು, ಇತರ ಪಶ್ಚಿಮದ ಅಣು ಶಕ್ತಿಗಳ ಅಣ್ವಸ್ತ್ರಗಳಿಗೂ (ಬ್ರಿಟನ್, ಫ್ರೆಂಚ್) ಇದು ಅನ್ವಯವಾಗಬೇಕೆಂಬ ನೀತಿ ಸಡಿಲಿಸಿದ್ದು ಇವಕ್ಕೆ ಕೆಲವು ಉದಾಹರಣೆಗಳು.

ಈ ಒಪ್ಪಂದದ ಚಾರಿತ್ರಿಕ ಮಹತ್ವವನ್ನು ಗಮನಿಸುವುದರ ಜೊತೆಗೆ ವಿಶ್ವ ಶಾಂತಿ ದೀರ್ಘ ಕಷ್ಟಕರ ಯಾತ್ರೆಯಲ್ಲಿ ಇದು ಒಂದು ಸಣ್ಣ ಮೊದಲ ಹೆಜ್ಜೆ ಎಂಬುದನ್ನು ಮರೆಯಬಾರದು. ಈ ಒಪ್ಪಂದ ಇಂದು ಜಗತ್ತಿನಲ್ಲಿರುವ ಅಣ್ವಸ್ತ್ರಗಳ ಶೇಕಡಾ 3 ಭಾಗವನ್ನು ಮಾತ್ರ ನಾಶ ಮಾಡುತ್ತದೆ ಎಂಬುದು ಸಮಸ್ಯೆಯ ಅಗಾಧತೆಯನ್ನು ತೋರಿಸುತ್ತದೆ. ಅಣ್ವಸ್ತ್ರಗಳ ಶೇಕಡಾ 50 ಕಡಿತ, ಶತಮಾನದ ಕೊನೆಯಹೊತ್ತಿಗೆ ಎಲ್ಲಾ ಅಣ್ವಸ್ತ್ರಗಳ ನಾಶ, ತಾರಾ ಸಮರಕ್ಕೆ ತಡೆ ಮುಂತಾದ ಇನ್ನೂ ಪ್ರಮುಖವಾದ ಗಂಭೀರವಾದ ವಿಷಯಗಳನ್ನು ಗೊರ್ಬಚೇವ್-ರೇಗನ್ ಶೃಂಗ ಸಭೆ ಚರ್ಚಿಸುತ್ತದೆ. ಗೊರ್ಬಚೇವ್ ಅವರ ಯೋಜನೆಗಳು ಒಪ್ಪಂದ ರೂಪದಲ್ಲಿ ಕಾರ್ಯಗತವಾದರೆ ಮಾತ್ರ ನಿಜವಾದ ವಿಶ್ವಶಾಂತಿ ಸಾಧ್ಯ. ಇದು ಸಾಧ್ಯವಾಗಿಸಲು ವಿಶ್ವದ ದುಡಿಯುವ ವರ್ಗ, ಪ್ರಜಾಸತ್ತಾತ್ಮಕ ಶಕ್ತಿಗಳು ಶಾಂತಿ ಚಳುವಳಿಯ ಮೂಲಕ ಒತ್ತಡ ಹೇರಬೇಕು. ಈ ಒಪ್ಪಂದದ ಚಿಗುರು ಫಲಿಸಿ ಹೆಮ್ಮರವಾಗಿ ಬೆಳೆಯಲಿ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone · 75331
Editorial and Managerial Office : L-56, K. V. Temple Street,
Editor : Ramachandra Rao
Managing Editor : N. K. Upadhyaya